# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲುQR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
70,000
HAMPI TIMES E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:01 Volume:01 • ಸಂಚಿಕೆ:343 Issue:343 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 18.06.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2





## Shanbhag Towers International (P) LTD

Shanbhag Circle, College Road, Hosapete-583201, Vijayanagara Dist.
Ph: 08394-225910 to 225914, M:8073847150, 9686603752, 9880419702 Email:shanbhagtowers@gmail.com

Shanbhag Towers International is a budget friendly hotel welcoming all travellers looking for a budget stay in a palace like structure. Our hotel interiors have been designed delicately with white marble featuring marvellous white stone carvings and statues imposing an air of peace and nobility. We are located in the heart of the city. The Railway station is merely 1.5 kms away and the KKRSTC Bus stand is within 500 Metres.

Internet/Wi-Fi | On Premise Parking | 24-hour front desk service | Bar | Restaurant | Breakfast | Laundry | Meeting/Banquet Facilities | ATM On Site | 24 Hours Power Backup | Elevator | Airport transfer | Rental car | Tour

Call Now 9482147421





S.M.TRADERS & SERVICES
ATLAS COPCO
COMPRESSORS, HOSEPIPE, DRILL RODS, SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201


ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.

ಡಿ.ವಿ.ಜಿ.


**ಸುದ್ದಿ, ಜಾಹೀರಾತು ಕಚೇರಿ**

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
# ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
94486 33038
Email: hampitimes@gmail.com


# ಉತ್ತಮ ಮಳೆ, ಶಾಂತಿ ಸಮೃದ್ಧಿಗಾಗಿ ಪ್ರಾರ್ಥನೆ

## ಮುಸ್ಲಿಂ ಸಮುದಾಯದಿಂದ ಬಕ್ರೀದ್ ಹಬ್ಬ ಆಚರಣೆ । ತ್ಯಾಗ-ಬಲಿದಾನಗಳನ್ನು ನೆನೆದ ಮುಖಂಡರು

**ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ಮುಸ್ಲಿಂ ಸಮುದಾಯ ತ್ಯಾಗ ಮತ್ತು ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಬೆಳಗ್ಗೆ 7ಕ್ಕೆ ಆರ್.ಟಿ.ಓ ಈದ್ಗಾ ಮೈದಾನದಲ್ಲಿ ನಂತರ ಚಿತ್ತವಾಡ್ಗಿ ಈದ್ಗಾ ಮೈದಾನದಲ್ಲಿ, ಟಿ.ಬಿ.ಡ್ಯಾಂ ಈದ್ಗಾ ಮೈದಾನದಲ್ಲಿ, ಬಳ್ಳಾರಿ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ, ಕಾರಿಗನೂರು ಈದ್ಗಾ ಮೈದಾನದಲ್ಲಿ, ನಾಗೇನ ಹಳ್ಳಿ ಈದ್ಗಾ ಮೈದಾನದಲ್ಲಿ ನಂತರ 08.30 ಗಂಟೆಗೆ ಅಂಬೇಡ್ಕರ್ ವೃತ್ತದ ಬಳಿ ಇರುವ ಗುಲಾಬ್ ಶಾ ವಲೀ ದರ್ಗಾದ ಈದ್ಗಾ ಮೈದಾನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕವಾಗಿ ಭಾಗವಹಿಸಿ ಶ್ರದ್ಧಾ ಭಕ್ತಿಯಿಂದ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭಾಶಯ ಕೋರಿದರು.



ಗುಲಾಬ್ ಶಾ ವಲೀ ದರ್ಗಾದ ಈದ್ಗಾ ಮೈದಾನದಲ್ಲಿ, ಪ್ರಾರ್ಥನೆ ನಂತರ ಅಂಜುಮನ್ ಕಮಿಟಿ ಅಧ್ಯಕ್ಷರಾದ ಹೆಚ್.ಎನ್. ಮಹಮ್ಮದ್ ಇಮಾಮ್ ನಿಯಾಜಿ ಮಾತನಾಡಿ, ದೇಶದಾದ್ಯಂತ ಉತ್ತಮ ಮಳೆ ಬೆಳೆಯಾಗಿ ಪ್ರತಿಯೊಬ್ಬರಿಗೂ ಸುಃಖ ಶಾಂತಿ, ನೆಮ್ಮದಿ ಸೌಹಾರ್ದತೆ, ನೀಡಿ ಪ್ರೀತಿ, ಪ್ರೇಮ, ವಾತ್ಸಲ್ಯದಿಂದ ಸಮೃದ್ಧಿಗೊಂಡು ಉತ್ತಮ ಆರ್ಥಿಕತೆ, ಆರೋಗ್ಯ, ಆಯುಷ್ಯ, ನೀಡಲಿ ಆ ಭಗವಂತನಲ್ಲಿ ಪ್ರಾರ್ಥಿಸಲಾಗಿದೆ. ಇಸ್ಲಾಂ ಧರ್ಮದ ಪ್ರವಾದಿ ಮೊಹಮ್ಮದ್ ಪೈಗಂಬರ್‌ರವರ ಆದೇಶದ ಪ್ರಕಾರ ಕುರ್ಬಾನಿ ಎಂದರೆ ತ್ಯಾಗ ಅಂದರೆ ನಮ್ಮಲ್ಲಿರುವ (ಅರಿಷಡ್ ವರ್ಗಗಳಾದ) ಕೆಟ್ಟ ಗುಣಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಹಾಗು ಇವುಗಳೊಂದಿಗೆ ಮುಂತಾದ ದುರ್ಗುಣಗಳನ್ನು ಬಿಟ್ಟು ಸಮಾಜದಲ್ಲಿ ಉತ್ತಮ ನಾಗರೀಕರಾಗಿ ಪರಸ್ಪರೊಂದಿಗೆ ಹಂಚಿ ತಿನ್ನುವ ಮನೋಭಾವನೆಯನ್ನು ಪ್ರತಿಯೊಬ್ಬರು ತಮ್ಮ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.



ಬಕ್ರೀದ್ ಹಬ್ಬದ ಆಚರಣೆಯ ಪ್ರಯುಕ್ತ ನೆಡೆದ ಸಾಮೂಹಿಕ ಪ್ರಾರ್ಥನೆಯನ್ನು ಮೌಲಾನಾಗಳಾದ ಮೊಹಮ್ಮದ್ ಅಬುಬಕರ್ ಅಶ್ರಫಿ ಪ್ರಾರ್ಥನೆಯನ್ನು ನೆರವೇರಿಸಿಕೊಟ್ಟರು.

ಅಂಜುಮನ್ ಸಂಸ್ಥೆಯ ಉಪಾಧ್ಯಕ್ಷ ಎಮ್ ಫಿರೋಜ್ ಖಾನ್ ಕಾರ್ಯದರ್ಶಿ ಎಮ್.ಡಿ.ಅಬೂಬಕ್ಕರ್ ಖಾಜಾಂಚಿ ಜಿ.ಅನ್ಸರ್ ಭಾಷ ಸಹಕಾರ್ಯದರ್ಶಿ ಡಾ.ಎಮ್.ಡಿ. ದುರ್ವೇಶ್ ಮೈನುದ್ದಿನ್ ಹಾಗು ಸದ್ಯಸರುಗಳಾದ ಕೋತ್ವಾಲ್ ಮೊಹಮ್ಮದ್ ಮೋಸಿನ್ ಅಡ್ವಕೇಟ್ ಸದ್ದಾಮ್ ಮತ್ತು ಎಲ್ ಗುಲಾಮ್ ರಸೂಲ್ ಅಬ್ದುಲ್ ಖಾದರ್ ರಫಾಯಿ ಖದೀರ್ ಹಾಗೂ ಮುಸ್ಲಿಂ ಮುಖಂಡರುಗಳಾದ ಖದೀರ್. ಜಫ್ರುಲ್ಲಾ ಖಾನ್‌ಸಾಬ್. ರಜಾಕ್ ಹಾಗೂ ಸಾವಿರಾರು ಮುಸ್ಲಿಂ ಭಾಂಧವರು ಇದ್ದರು.


PUBLISH YOUR ADVERTISEMENT IN
HAMPI TIMES DAILY NEWSPAPER
Minimum Cost Maximum Promotion



ವಿಜಯನಗರ ಜಿಲ್ಲೆಯ ಹೆಮ್ಮೆ
ಸ್ಥಳೀಯ ನಂ.1 ಕನ್ನಡ ದಿನಪತ್ರಿಕೆ
ಹಂಪಿ ಟೈಮ್ಸ್ ಇ-ಪೇಪರ್
ವಿಶ್ವದ ವಿವಿಧೆಡೆ ಇರುವ
70,000+
ಕನ್ನಡ ಓದುಗರ ಕೈಯಲ್ಲಿ...

SCAN & READ HAMPI TIMES E-PAPER

- Discount Offers
- Good Creative Desgin
- Economical Ads Rates
- Combination Offers Available

CALL US NOW 94486 33038

www.hampitimes.com/epaper.hampitimes.com

## ಬೆಳಕಿನ ಹಾದಿ

# ಕಲಿಕೆಯಲ್ಲಿ ಪಾಲಕರೂ ಜವಾಬ್ದಾರರು

■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ



ಮಕ್ಕಳ ಸಂತೋಷದ ವಿಚಾರದಲ್ಲಿ ನಾವೆಲ್ಲರೂ ರಾಜಿ ಮಾಡಿಕೊಳ್ಳುವುದಿಲ್ಲ. ನಾವು ಅವರಿಗೆ ಪ್ರಪಂಚದ ಎಲ್ಲಾ ಸಂಪತ್ತು ಮತ್ತು ಸಂತೋಷಗಳನ್ನು ನೀಡುತ್ತೇವೆ. ನಮ್ಮ ಕಷ್ಟ ನಮ್ಮ ಮಕ್ಕಳಿಗೆ ಬರಬಾರದು ಎಂದು ಯೋಚಿಸುತ್ತೇವೆ. ಸಾಲ ಮಾಡಿಯಾದ್ರೂ ಉತ್ತಮ ಶಿಕ್ಷಣ ನೀಡಬೇಕು ಎಂದು ಶತಪ್ರಯತ್ನ ಮಾಡುತ್ತೇವೆ. ನಮಗೆ ಒಂದು ಹೊತ್ತಿನ ಊಟ ಇಲ್ಲದಿದ್ರೂ ನಮ್ಮ ಮಕ್ಕಳು ತಿಂದುಂಡು ಸುಖವಾಗಿರಲಿ ಎಂದು ಹಲಬುತ್ತೇವೆ. ನಮ್ಮ ಮಕ್ಕಳಿಂದ ನಮ್ಮ ಕಷ್ಟ ದೂರವಾದ್ರೆ ಸಾಕು ಎಂದುಕೊಳ್ಳುತ್ತೇವೆ. ನಾವು ಸುಖವಾಗಿರದಿದ್ದರೂ ನಮ್ಮ ಮಕ್ಕಳು ಸುಳವಾಗಿರಲಿ ಎಂದು ಪ್ರತಿಯೊಂಬ್ಬ ತಂದೆ ತಾಯಿಗಳು ಪ್ರಾರ್ಥಿಸುತ್ತಾರೆ.

ಹೀಗೆ ಪ್ರಾರ್ಥಿಸುವುದು, ಚಿಂತಿಸುವುದು ತಪ್ಪಲ್ಲ. ಆದರೆ ನಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ? ಹೇಗೆ ಕಲಿಯುತ್ತಿದ್ದಾರೆ? ಎಂಬುದರ ಕಡೆಗೂ ಒಂಚೂರು ಗಮನಹರಿಸುವುದು ಮುಖ್ಯ. ಏಕೆಂದರೆ ಈಗಿನ ಕಾಲದ ಮಕ್ಕಳಿಗೆ ತಂದೆ ತಾಯಿ ಯಾರಿಗಾಗಿ ಕಷ್ಟ ಪಡುತ್ತಿದ್ದಾರೆ? ಎಂಬುದನ್ನು ತಿಳಿಯುತ್ತಿಲ್ಲ. ಪಾಲಕರಾದ ನಾವೂ ಸಹ ಈ ಪ್ರಯತ್ನ ಮಾಡುತ್ತಿಲ್ಲ. ಹಗಲೆಲ್ಲ ದುಡಿದು ದಣಿದ ನಾವುಗಳು ಸಂಜೆಯಾಗುತ್ತಲೇ ಟಿ.ವಿ. ಮುಂದೆ ಕುಳಿತುಕೊಳ್ಳುತ್ತೇವೆ. ನಮ್ಮ ಮಕ್ಕಳ ಕಲಿಕೆ-ಶಿಕ್ಷಣ ಇದೆಲ್ಲವನ್ನೂ ಮರೆಯುತ್ತೇವೆ. ಇದೇ ನಾವು ಮಾಡುವ ದೊಡ್ಡ ತಪ್ಪು.

ಪ್ರತಿದಿನ ಮಕ್ಕಳು ಶಾಲೆಯಲ್ಲಿ ಏನೇನು ಕಲಿತಿದ್ದಾರೆ? ಏನೇನು ಹೋಂವರ್ಕ್ ಕೊಟ್ಟಿದ್ದಾರೆ? ಎಂಬುದನ್ನು ಪರಿಶೀಲಿಸದಿದ್ದರೆ ನಮ್ಮ ಮಕ್ಕಳು ನಮಗೆ ವಂಚನೆಯ ದಾರಿ ಹಿಡಿಯುತ್ತಾರೆ. ದಿನವೂ ಯಾರಾದರೂ ಒಬ್ಬರೂ ಅಂದರೆ ತಂದೆ ಅಥವಾ ತಾಯಿ ಕನಿಷ್ಟ ಅರ್ದ ಗಂಟೆ ಮಕ್ಕಳ ಜೊತೆ ಕುಳಿತು ಅವರ ಕಲಿಕೆಯ ಬಗ್ಗೆ ನಿಗಾವಹಿಸಬೇಕು. ಇಲ್ಲದಿದ್ದರೆ ಕ್ರಮೇಣವಾಗಿ ಅವರ ಕಲಿಕೆ ಹಿಂದೆ ಬೀಳುತ್ತಾರೆ. ಸುಳ್ಳು ಹೇಳಲು ಪ್ರಾರಂಭಿಸುತ್ತಾರೆ. ಆಗಾಗ್ಗೆ ಶಾಲೆಗೆ ಭೇಟಿ ನೀಡಿ ಶಿಕ್ಷಕರೊಂದಿಗೆ ನಮ್ಮ ಮಕ್ಕಳ ಕಲಿಕೆಯ ಕುರಿತು ಚರ್ಚಿಸಬೇಕು. ಆಗ ಮಾತ್ರ ಅವರು ಕಲಿಕೆಯಲ್ಲಿ ಹೆಚ್ಚು ತಲ್ಲೀನರಾಗುತ್ತಾರೆ.

ಇನ್ನು ಕೆಲವು ಮಕ್ಕಳು ಕಲಿಕೆಯಲ್ಲಿ ನಿರಾಸಕ್ತಿ ಹೊಂದಿರುತ್ತಾರೆ. ಅಂತವರಿಗೆ ಅವರು ಇಚ್ಛಿಸುವ ಕೌಶಲ್ಯಗಳನ್ನು ಬೆಳಸಲು ಸೂಕ್ತ ಕ್ರಮಕೈಗೊಳ್ಳಬೇಕು. ಆಸಕ್ತಿ ಇಲ್ಲದೇ ಕಲಿತರೆ ಸಮಯ ವ್ಯರ್ಥವಾಗುತ್ತದೆ. ಸಾಧ್ಯವಾದಷ್ಟೂ ಈಗಿನ ಕಾಲದ ಮಕ್ಕಳಿಗೆ ಶ್ರಮದ ಬೆಲೆ ತಿಳಿಸಬೇಕು. ಪಾಲಕರಾದ ನಾವು ಯಾಕೆ ಕಷ್ಟಪಡುತ್ತೇವೆ? ಹೇಗೆ ಕಷ್ಟಪಡುತ್ತೇವೆ? ಎಂಬುದನ್ನು ಮಕ್ಕಳಿಗೆ ತಿಳಿಸಬೇಕು. ಇಲ್ಲದಿದ್ದರೆ ಅವರಲ್ಲಿ ಶ್ರಮದ ಗೌರವ ಬೆಳೆಯುವುದಿಲ್ಲ. ಶ್ರಮದ ಗೌರ ಬೆಳೆಸಿಕೊಳ್ಳದೇ ಶ್ರಮವಹಿಸಿ ಕಲಿಯಲು ಸಾಧ್ಯವಿಲ್ಲ ಅಲ್ಲವೇ?

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

- ಜಾಹೀರಾತು ವ್ಯವಸ್ಥಾಪಕರು.

### ಬಲಗಣ್ಣು ನ್ಯೂನತೆಗೊಳಗಾದರೂ, ಕುಹಕಗಳು ಕಿವಿಗಪ್ಪಳಿಸಿದರೂ ಕಿವಿಗೊಡದೆ, ತುಮಕೂರಿನ ಅಂತರಾಷ್ಟ್ರೀಯ ಮಹಿಳಾ ಕ್ರೀಡಾಪಟು

# ಕ್ರೀಕೇಟ್ ಕ್ರೀಡೆಯಲ್ಲಿ ಮಿಂಚಿದ ದೀಪಿಕಾ

ಬಡತನದ ಬೇಗೆಯಲ್ಲಿ ಬೆಂದರೂ ನಾಡಿಗೆ ಸಾಧನೆಯ ಬೆಳಕನ್ನು ಚೆಲ್ಲಿದ ಕೀರ್ತಿ ದೀಪಿಕಾರವರಿಗೆ ಸಲ್ಲುತ್ತದೆ.

ಇವರು ಸಮರ್ಥನಂ ಹಾಸ್ಟೆಲ್ ನಲ್ಲಿದ್ದಾಗ ತನಗೆ ಊಟ ಸಿಕ್ಕರು ನೆಮ್ಮದಿಯಿಂದ ಸೇವನೆ ಮಾಡಲಾಗುತ್ತಿರಲಿಲ್ಲ ಕಾರಣ ಮನೆಯಲ್ಲಿದ್ದ ಅಪ್ಪ-ಅಮ್ಮ ಊಟ ಮಾಡಿದ್ದಾರೋ ಇಲ್ಲವೋ ಎಂಬ ಚಿಂತೆ ಕಾಡುತ್ತಿದ್ದರೂ ಸಹ ನಾಡಿಗಾಗಿ ಸಾಧನೆ ಮಾಡಿದ ಸಹೋದರಿ ನಿಜಕ್ಕೂ ಹೆಮ್ಮೆಯ ಕ್ರೀಡಾಪಟು.

ತುಮಕೂರು ಜಿಲ್ಲೆ, ಸಿರಾ ತಾಲೂಕಿನ, ಕೆರೆ ತಿಮ್ಮನಹಳ್ಳಿ, ತಂಬಳಹಟ್ಟಿ ಗ್ರಾಮದ ಚಿಕ್ಕತಿಮ್ಮಪ್ಪ ಹಾಗೂ ಚಿತ್ತಮ್ಮನ ಮಗಳಾಗಿ ಜನಿಸಿದ ಇವರು 05 ತಿಂಗಳ ಮಗುವಾಗಿದ್ದಾಗ ತಿಳಿಯದೆ ಪರಚಿಕೊಂಡ ಹಿನ್ನಲೆ ಬಲಗಣ್ಣು ಅಂಗ ನ್ಯೂನ್ಯತೆಗೆ ಒಳಗಾಗುತ್ತದೆ. ಕಳೆದುಕೊಂಡ ಕಣ್ಣು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕರೆತಂದು ನಿಲ್ಲಿಸುತ್ತದೆ ಎಂದರೆ ಕಣ್ಣಿದ್ದ ನಾವು ತುಸು ಯೋಚಿಸಬೇಕು!

01-04 ತರಗತಿಯವರೆಗೆ ಸಾಮಾನ್ಯರಂತೆ ಓದಿದ ಇವರು ನಂತರ 04-07 ಕುಣಿಗಲ್ಲಿನಲ್ಲಿರುವ ಸಿದ್ದಗಂಗಾ ಮಠದ ಶಾಲೆಯಲ್ಲಿ, 08-10ನೇ ತರಗತಿಯನ್ನು ರಂಗರಾವ್ ಮೆಮೋರಿಯಲ್ ಸ್ಕೂಲ್ ಫಾರ್ ಡಿಸೆಬಲ್, ಪದವಿಪೂರ್ವ ಶಿಕ್ಷಣವನ್ನು ಬರಗೂರು ಜ್ಞಾನಜ್ಯೋತಿ ಪದವಿಪೂರ್ವ ಕಾಲೇಜು ಹಾಗೂ ಬಿ,ಎ.ಪದವಿಯನ್ನು ಬೆಂಗಳೂರಿನ ಸರ್ಕಾರಿ ಪದವಿ ಕಾಲೇಜು ವಿಜಯನಗರ ಇಲ್ಲಿ ಪೂರೈಸಿರುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

ಐ.ಎ.ಎಸ್.ಕನಸನ್ನು ಹೊತ್ತು ಕಠಿಣ ಅಭ್ಯಾಸ ನಡೆಸುತ್ತಿರುವ ದೀಪಿಕಾ ರವರು ತಮ್ಮ ಪ್ರೇರಣೆಯ ಕ್ರಿಕೆಟ್ ಕ್ರೀಡಾಪಟುವಾಗಿ ವಿರಾಟ್ ಕೊಹ್ಲಿಯನ್ನು ಅನುಸರಿಸುತ್ತಿದ್ದಾರೆ ಅವರಂತೆಯೇ ದೇಶದ ಕೀರ್ತಿ ಮುಗಿಲೆತ್ತರಕ್ಕೆ ಕೊಂಡೊಯ್ಯುವ ಕನಸನ್ನು ಹೊತ್ತಿದ್ದಾರೆ.

ಅಂಧರ ಶಾಲೆಗೆ ಕರೆದುಕೊಂಡು ಹೋಗಿ ಇವರನ್ನು ಸೇರಿಸಿದಾಗ ಊರಿನವರೆಲ್ಲ ಹೀಯಾಳಿಸಿ ಕೊಂಡು ನಕ್ಕಿದ್ದನ್ನು ಸಹಿಸಿ, ನಮ್ಮ ಪೋಷಕರು ಹೆಮ್ಮೆಯಿಂದ ತಿರುಗಾಡುವಂತೆ ಮಾಡಿದ್ದೇನೆ ತಂದೆ-ತಾಯಿಗೆ ನೀಡಿದ ಮಾತು ಉಳಿಸಿಕೊಂಡಿದ್ದೇನೆ ಅದೇ ನನ್ನ ಜೀವನದ ಸಾರ್ಥಕತೆ ಎನ್ನುತ್ತಾರೆ.

ಎಲ್ಲರಂತೆ ನಾನು ಕೂಡ ಸಾಮಾನ್ಯರಂತೆ ಶಾಲೆಯಲ್ಲಿ ಲಭ್ಯವಿರುವ ಎಲ್ಲಾ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದೆ ಮೋಹನ್ ಕುಮಾರ್ ಹಾಗೂ ಹರೀಶ್ ನನ್ನಲ್ಲಿದ್ದ ಕ್ರೀಡಾ ಕೌಶಲ್ಯವನ್ನು ಗುರುತಿಸಿ ಕ್ರೀಡೆಯಲ್ಲಿ ಮುಂದುವರಿಯುವಂತೆ ಪ್ರೇರಣೆ ನೀಡುತ್ತಾರೆ.





### ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಸಾಧನೆಗಳು

2023(ನೇಪಾಳ)ನೇಪಾಳ ಕ್ರಿಕೆಟ್ ಸೀರೀಸ್ ರನ್ನರ್ಸ್.

2023 ಆಗಸ್ಟ್ ಮಾಯೆಯಲ್ಲಿ ಇಂಗ್ಲೆಂಡ್ನಲ್ಲಿ ನಡೆದ ಅಂತರಾಷ್ಟ್ರೀಯ ಐ.ಬಿ.ಎಸ್.ಇ.ವರ್ಲ್ಡ್ ಗೇಮ್ ಕ್ರಿಕೆಟ್ ನಲ್ಲಿ ವಿನ್ನರ್ ಆಗಿರುತ್ತಾರೆ.

ರಾಷ್ಟ್ರಮಟ್ಟದಲ್ಲಿ ಈ ಕೆಳಕಂಡ ಸಾಧನೆಗಳನ್ನು ಮಾಡಿರುತ್ತಾರೆ.

2019(ದೆಹಲಿ)ರಾಷ್ಟ್ರೀಯ ಪ್ಯಾರಾ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿಯಲ್ಲಿ ರನ್ನರ್ಸ್.

2022(ಬೆಂಗಳೂರು)ರಾಷ್ಟ್ರೀಯ ಪ್ಯಾರಾ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ ರನ್ನರ್ಸ್.

2023(ಬೆಂಗಳೂರು)ರಾಷ್ಟ್ರೀಯ ಪ್ಯಾರಾ ಮಹಿಳೆಯರ ಕ್ರೀಡಾಕೂಟ ವಿನ್ನರ್ಸ್.

10ನೇ ತರಗತಿ ನಂತರ ರಾಮನಗರ ಮತ್ತು ಮೈಸೂರು ನಡುವೆ ಕ್ರಿಕೆಟ್ ಪಂದ್ಯವನ್ನು ಏರ್ಪಡಿಸಿದ್ದರು ಇವರು ಆಗ ಕ್ರಿಕೆಟ್ನಲ್ಲಿ ಉತ್ತಮ ಪ್ರದರ್ಶನವನ್ನು ತೋರ್ಪಡಿಸಿದ ಪರಿಣಾಮ ಇಂದು ಈ ಹಂತ ತಲುಪಲು ಸಾಧ್ಯವಾಗಿದೆ.

ಹಿರಿಯ ಆಟಗಾರರು ಸಮರ್ಥನಂ ಸಂಸ್ಥೆಯ ಬಗ್ಗೆ ಹಾಗೂ ಅದರ ಕಾರ್ಯವೈಖರಿ ಮತ್ತು ವಿಕಲಚೇತನರಿಗೆ ನೀಡುತ್ತಿರುವ ಪ್ರೋತ್ಸಾಹದ ಬಗ್ಗೆ ತಿಳಿಸುತ್ತಾರೆ.

ಇವರ ಅದೃಷ್ಟವೇ ಸರಿ ಎಂಬಂತೆ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯ ಆಯ್ಕೆ ಪ್ರಕ್ರಿಯೆ ನಡೆಯುತ್ತಿರುತ್ತದೆ ನಂತರ ಮೋಹನ್ ರವರು ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ತಿಳಿಸುತ್ತಾರೆ ಆದರೆ ಆಯ್ಕೆಯಾದ ಇವರನ್ನು ಕಳುಹಿಸಿಕೊಡಲು ಅಪ್ಪ- ಅಮ್ಮ ನಿರಾಕರಿಸುತ್ತಾರೆ ಕಾರಣ ಬಡತನ ಆದರೆ ಮೋಹನ್ ಸರ್ ರವರು ಪೋಷಕರನ್ನು ಒಪ್ಪಿಸಿ ಅವರದೇ ಸ್ವಂತ ಹಣದಲ್ಲಿ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಕಳುಹಿಸಿಕೊಡುತ್ತಾರೆ.

ಸಮರ್ಥನಂ ಸಂಸ್ಥೆಯ ಹಿರಿಯ ಆಟಗಾರರಾದ ಲೋಕಿ, ಬಾಸ್ಕರ್, ಪ್ರಕಾಶ್ ಜಯರಾಮ್, ಸುನಿಲ್, ರಮೇಶ್, ಶಿಖಾಶೆಟ್ಟಿ ಇವರೆಲ್ಲರ ಮಾರ್ಗದರ್ಶನದ ಫಲವಾಗಿ 2019 ರಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಯಲ್ಲಿ ಪಾಲ್ಗೊಳ್ಳುತ್ತಾರೆ.

ಸರ್ಕಾರವು ನಮ್ಮಂತ ವಿಕಲಚೇತನರನ್ನು ಗುರುತಿಸಬೇಕು ಹಾಗೂ ಉದ್ಯೋಗ, ಆರ್ಥಿಕ ನೆರವನ್ನು ನೀಡಿ ಅಂಧ ಮಹಿಳಾ ಕ್ರಿಕೆಟ್ ಪಂದ್ಯಾವಳಿಗಳನ್ನು ಹೆಚ್ಚು ಹೆಚ್ಚು ಆಯೋಜಿಸಿ ವ್ಯಾಪಕ ಪ್ರಚಾರವನ್ನು ನೀಡುವುದರ ಮೂಲಕ ಕ್ರೀಡೆಯ ಬೆಳವಣಿಗೆಗೆ ಪೂರಕ ವಾತಾವರಣ ಸೃಷ್ಟಿಸಬೇಕು ಎಂಬ ಮಾತಿನೊಂದಿಗೆ ಸಾಧಕರಿಗೆ ಉದ್ಯೋಗವನ್ನು ಕಲ್ಪಿಸಿದರೆ ಬಡತನ ಬಗೆಹರಿದು ಸಾರ್ಥಕ ಜೀವನದೊಂದಿಗೆ ಕ್ರೀಡೆಯಲ್ಲಿ ಮುಂದುವರೆಯಲು ಉತ್ಸಾಹ ದೊರೆಯುತ್ತದೆ ಎಂಬುದಾಗಿ ಸರ್ಕಾರದಿಂದ ಸಹಕಾರವನ್ನು ನೀಡುವಂತೆ ವಿನಂತಿಸುತ್ತಾರೆ.

ಬಿ.ಸಿ.ಸಿ.ಐ.ನವರು ವಿಕಲಾಂಗ ಚೇತನರ ಕ್ರಿಕೆಟ್ ಪಂದ್ಯಾವಳಿಗಳನ್ನು ನಡೆಸುವ ಜವಾಬ್ದಾರಿಯನ್ನು ತೆಗೆದುಕೊಂಡು ಸಹಕರಿಸಬೇಕು ಎನ್ನುತ್ತಾರೆ.

ತಂದೆ-ತಾಯಿಯ ಆಶೀರ್ವಾದ ಬಹಳ ಮುಖ್ಯ ಅವರ ಪ್ರೋತ್ಸಾಹದಿಂದ ಯಾವುದೇ ಆಸಕ್ತಿಯುಳ್ಳ ಚಟುವಟಿಕೆಯಲ್ಲಿ ವಿಕಲಚೇತನರು ತೊಡಗಿದ್ದೆ ಆದರೆ ಸಮಾಜಕ್ಕೆ ಮಾದರಿಯಾಗುತ್ತಾರೆ ಎಂಬುದಾಗಿ ನುಡಿಯುತ್ತಾ ನಾನು ರೈತನ ಮಗಳು ಅದೆಷ್ಟೇ ಕಷ್ಟ ಬಂದರೂ ಜಗ್ಗುವುದಿಲ್ಲ ಸಾಧನೆ ಮಾಡಿ ತೋರಿಸುವ ತವಕ ನನ್ನದು ಆದರೆ ನನಗೆ ಸಹಕಾರ ನೀಡುವ ಜವಾಬ್ದಾರಿ ನಿಮ್ಮದು ಎಂಬ ಮಾತನ್ನು ಸಮಾಜದಲ್ಲಿರುವ ದಾನಿಗಳ ಪಾದಗಳಿಗೆ ಅರ್ಪಿಸುತ್ತಾರೆ.

ಇಲ್ಲಿಯವರೆಗೂ ಸಹಕರಿಸಿದ ಸಮರ್ಥನಂ ಸಂಸ್ಥೆಯ ಸರ್ವರಿಗೂ, ಮಾರ್ಗದರ್ಶನ ನೀಡಿದ ಹಿರಿಯ ಆಟಗಾರರಿಗೂ, ನನ್ನೆಲ್ಲಾ ತರಬೇತುದಾರರಿಗೂ, ಪ್ರೇರಣೆ ನೀಡಿದ ಪ್ರೇರಕರಿಗೂ, ಕ್ರೀಡಾ ಸಾಧನೆಯನ್ನು ಗೌರವಿಸಿ, ಪ್ರೋತ್ಸಾಹ ನೀಡುತ್ತಿರುವ ಸರ್ವರಿಗೂ ಕೃತಜ್ಞತೆಗಳನ್ನು ತಿಳಿಸುತ್ತಾ, ಸಾಲದ ಹೊರೆಯನ್ನು ಹೊತ್ತು ತನ್ನ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಕೆಲಸ ಮಾಡಿ ಮನೆತನವನ್ನು ನೋಡಿಕೊಳ್ಳುತ್ತಿರುವ ತನ್ನ ತಮ್ಮನನ್ನು ನನ್ನ ಪಾಲಿನ ದೇವರು ಎಂದು ಹೇಳುತ್ತಾರೆ ಸಾಧಕಿ.

ಜನರ ಕೊಂಕು ನುಡಿ, ಬಡತನ, ಹಸಿವು ನನ್ನನ್ನು ಏನಾದರೂ ಸಾಧಿಸಲೇಬೇಕು ಎಂಬ ಗುರಿಯ ಕಡೆಗೆ ಕರೆದುಕೊಂಡು ಹೋಗುತ್ತಿರುವುದನ್ನು ಸದಾ ನೆನೆಯುತ್ತಾರೆ.

ಸಾಧಿಸುವುದು ಸಾಕಷ್ಟು ಇದೆ ಅದಕ್ಕೆ ನಿಮ್ಮೆಲ್ಲರ ಸಹಕಾರ ಮತ್ತು ಆಶೀರ್ವಾದದ ಅವಶ್ಯಕತೆ ಇದೆ ಎಂದು ಭಾವುಕರಾಗಿ ಮೌನಕ್ಕೆ ಜಾರಿದರು ದೀಪಿಕಾ.

ಮರುಕ ಪಡದಿರು ಸಹೋದರಿ, ನಿನ್ನೆಲ್ಲ ಕನಸುಗಳಿಗೆ ನಿನ್ನ ಆತ್ಮ ಬಲವೇ ಬಲವಾದ ಆಯುಧ. ಧೃತಿಗೆಡದೆ ಗೆದ್ದು ಬೀಗುವಂತಹ ಸಾಧನೆ, ಬಾಗಿ ಸ್ವೀಕರಿಸುವ ಸಹೃದಯ ನಿನ್ನದಾಗಲೆಂದು ಮನತುಂಬಿ ನಾಡಜನರು ಹಾರೈಸುವಂತಾಗಲಿ.

# ಅರಿವು ಮತ್ತು ಅಕ್ಷರದ ಮಧ್ಯೆ ಬದುಕ್ಕೊಂದು ಸಂಭ್ರಮ

ವಿದ್ಯಾರ್ಥಿಗಳು ಭತ್ತ ತುಂಬವ ಚೀಲಗಳಾಗಬಾರದು, ಭತ್ತ ಬೆಳೆಯುವ ಗದ್ದೆಗಳಾಗಬೇಕು ಎಂದು ಕುವೆಂಪು ಹೇಳಿದ್ದಾರೆ. ಯುಗದ ವ್ಯಕ್ತಿ ಜಗದ ಶಕ್ತಿ ಮೊಳಗಲಿ ,ಯುಗಯುಗದಲ್ಲಿ ನಮ್ಮ ಯುವಕರು ವಿದ್ಯಾವಂತರು, ಪ್ರಜ್ಞಾವಂತರು ಎಂಬ ಆಶಯದಲ್ಲಿ ಅಭಿವೃದ್ಧಿ ಮಂತ್ರ ಘೋಷಣೆ ವಾಕ್ಯವಾಗಬೇಕು, ಆಗ ಮಾತ್ರ ನಾವು ನಮ್ಮ ಉದ್ದೇಶವು ಸಾರ್ಥಕವಾಗುತ್ತದೆ. ಹಾಗೇನೆ ಕುವೆಂಪುರವರು ಹೇಳಿದಂತೆ ಯುವಕರ ಉತ್ಸಾಹ ಹುಲ್ಲಿಗೆ ಹತ್ತಿದ ಬೆಂಕಿಯಂತಿರಬಾರದು, ಬದಲಿಗೆ ಕಲ್ಲಿದ್ದಲಿನ ಕಾವಾಗಿರಬೇಕು ಎಂತಲೇ ಓದುವ ಮಕ್ಕಳು ತರಗತಿಯ ಕಪ್ಪು ಹಲಗೆಯ ಭವಿಷ್ಯದ ಕನ್ನಡಿ ಆಗಬೇಕು. ಬದುಕು ಮೌಲ್ಯದಿಂದ ಕೂಡಿ, ಚೈತನ್ಯಶೀಲರಾಗಬೇಕು ಇಲ್ಲವಾದರೆ ,ಅರಿವಿನ ದೀಪವಿಲ್ಲದೆ ಜಗತ್ ಕಗ್ಗತ್ತಿಲಿನ ಮಸಿ ಮುಚ್ಚಿ ಜ್ಞಾನ ಲೋಕವೇ ಕಳೆದು ಹೋದರೆ ಬದುಕಿನ ಅಮೂಲ್ಯ ಕ್ಷಣಗಳು ಅಮೂರ್ತವಾಗಿರುತ್ತವೆ. ಮನುಷ್ಯನು ಮೂಡಲೋಕದ ಕೂಪದಲ್ಲಿ ಬಿದ್ದು ಅಮತ್ಯರಾಗಿ ವಿತ್ತಂಡವಾದದಲ್ಲಿ ಕಾಲ ಕಳೆಯುವುದಕ್ಕಿಂತ ಅರ್ಥವತ್ತಾದ ಬದುಕಿನ ಕಡೆ ತಿರುಗಿ ,ಒಂದು ಹೆಮ್ಮರವಾಗಿ ಬೆಳೆದು ತನ್ನವರನ್ನು ಆ ಮರದ ನೆರಳಲ್ಲಿ ಆಶ್ರಯ ನೀಡಿದರೆ ಬದುಕಿಗೊಂದು ಅರ್ಥ. ಆದರೆ ಜನಗಳು ಪ್ರಜ್ಞಾಹೀನರಾದರೆ ಲೋಕಜ್ಞಾನವೇ ಇಲ್ಲದೆ ಅರ್ಥಹೀನರಾದರೆ ಎನ್ನುವುದು ಅನರ್ಥ?. ಖಲೀಲ್ ಗೀಬ್ರಾನ್ ಹೇಳುವಂತೆ ಜ್ಞಾನವೇ ಜೀವನದ ಸುಖವನ್ನು ಹೆಚ್ಚಿಸಬೇಕು. ಇದರಿಂದ ಜನರ ಕಲ್ಪನೆ ಹೂವಿನಂತೆ ಅರಳಿ, ಹಣ್ಣಿನಂತೆ ಮಾಗಿ ,ಸಂಕೀರ್ಣತೆ ದೂರವಾಗಬೇಕು. ಅಂದರೆ ಗುಡಿಸಿಲಿನಲ್ಲಿ ಬದುಕುವ ಮಂದಿಯ ಬಾಳು ಹಸನಾಗಬೇಕಾದರೆ ಅನ್ನ ನೀರು ಅಕ್ಷರ ಆರೋಗ್ಯ ರಕ್ಷಣೆ ನೀಡಬೇಕು. ಆಗ ಭಾರತದ ಚಿತ್ರಣವೇ ರಂಗಾಗುತ್ತದೆ. ಒಮ್ಮೆ ಸ್ವಾಮಿ ವಿವೇಕಾನಂದರು ಕಲ್ಕತ್ತದಲ್ಲಿ ದೇವಸ್ಥಾನಕ್ಕೆ ಹೋಗಬೇಕಾದರೆ ಕೊಳಚೆ ಪ್ರದೇಶದಲ್ಲಿರುವ ಗುಡಿಸಿಲುಗಳಿಗೆ ಶಿರಭಾಗಿ ಹೋಗುತ್ತಿದ್ದರಂತೆ. ಅದನ್ನು ಗಮನಿಸಿದ ಕೆಲ ವ್ಯಕ್ತಿಗಳು ಮಹಾಸಂತರೇ ನೀವು ಪ್ರತಿ ಗುಡಿಸಲಿಗೂ ನಮಸ್ಕರಿಸುವುದು ಏಕೆ ಎಂದು ಕೇಳಿದರಂತೆ? ನೋಡಿ ಮಹಾಭಕ್ತರೇ ನಾವು ಈಗಲೂ ಗುಡಿಸಲು ಕಡೆ ಗಮನಹರಿಸದಿದ್ದರೆ ಭಾರತದ ಅಭಿವೃದ್ಧಿಯು ಕಷ್ಟ ಸಾಧ್ಯ. ಭಾರತದ ಭವಿಷ್ಯ ಗುಡಿಸಲಲ್ಲಡಗಿದೆ ನನ್ನ ಪ್ರಕಾರ ಗುಡಿಸಲುಗಳೆ ದೇವಸ್ಥಾನ ಅದರಲ್ಲಿ ವಾಸಿಸುವ ವ್ಯಕ್ತಿಯೇ ನನ್ನ ಅಭಿವೃದ್ಧಿಯ ನೇತಾರ ಶ್ರಮಿಕನೇ ನಮಗೆ ದೇವರು. ಕೃಷಿ, ಕೈಗಾರಿಕೆ ,ಕಟ್ಟಡ ,ರಸ್ತೆ ಎಲ್ಲವೂ ಅವನ ನಿರ್ಮಾಣ. ನಾವು ಅವರ ಬೆವರಿನ ಹನಿ ಹೀರಿ ಸಕಲ ಸೌಲಭ್ಯದ ಸುಖದಲ್ಲಿ ಬದುಕುತ್ತಿದ್ದೇವೆ ಅಷ್ಟೇ! ದೇವರ ಕೊಟ್ಟ ಪ್ರಕೃತಿಯನ್ನು ವಿಧವಿಧ ಆಕೃತಿ ಆಕಾರ ನೀಡಿ ಸೌಂದರ್ಯದ ಸೊಬಗನ್ನು ಹೆಚ್ಚಿಸುವ ಮಹಾಕಾಯಕಯೋಗಿಗೆ ನಾವೆಲ್ಲರೂ ಕೃತಜ್ಞರಾಗಿರಬೇಕಲ್ಲವೇ ಎಂದು ತುಸು ನಗೆ ಚೆಲ್ಲಿ ಮುಂದೆ ಹೋದನಂತೆ.

ಕತ್ತಲು ಸರಿದು ಬೆಳಕಿನ ಪ್ರಕರತೆ ಹೆಚ್ಚಾದಂತೆಲ್ಲ ನಮ್ಮ ಬದುಕಿನ ಚಟುವಟಿಕೆಗಳಾದ ಕೃಷಿ ,ಕೈಗಾರಿಕೆ ,ವಿವಿಧ ಉದ್ಯೋಗಕ್ಕೆ ಬೆಳಗು ಜಾವದಲ್ಲಿ ಮೈಕೊಡವಿ ಎದ್ದು, ಲೋಕಾಮೃತದ ಸವಿಯ ಕಡೆ ಸಾಗುವವರು ನಮ್ಮ ದುಡಿಯುವ ವರ್ಗದವರು. ಒಬ್ಬ ಮನುಷ್ಯನು ಒಂದು ಸುಂದರ ಕನಸಲಿ ಏನೋ ಆಲಿಸುತ್ತಿದ್ದಂತೆ ,ಏನೋ ನೋಡುತ್ತಿದ್ದಂತೆ ಇದ್ದ ದೃಶ್ಯವೂ ಎಂಥವರನ್ನು ಸೋಜಿಗಪಡಿಸುತ್ತದೆ. ಮನ ಕರಿಗಿಸುತ್ತದೆ ಮುನ್ನೋಟದ ಮೈಮಾಟ ಚೆಲ್ಲಿ ಕಲಿಯುವ ಮಕ್ಕಳಿಗೆ ಮೈ ರೋಮಾಂಚನ ನೀಡುವ ಕೆಲ ಸನ್ನಿವೇಶ ಪ್ರಕೃತಿಯ ಪಾಠದ ದೃಶ್ಯವಾಗಿ ಕಾಣಿಸುತ್ತದೆ.

ಒಮ್ಮೆ ಶಿಕ್ಷಕ ತನ್ನ ಪಾಠದಲ್ಲಿ ತೊಡಗಿದ್ದಾಗ ವಿದ್ಯಾರ್ಥಿಯೊಬ್ಬ ಸಂಪೂರ್ಣ ತನ್ನನ್ನೇ ತಾನೇ ಪಾಠಕ್ಕೆ ಅರ್ಪಿಸಿಕೊಂಡು ಭವಿಷ್ಯದ ಸದೃಶಕಲ್ಪನೆಗೆ ಜಾರಿರುವದನ್ನು ,ಪಕ್ಕದ ಗೆಳೆಯನೊಬ್ಬ ನೋಡಿ ಮಾತನಾಡಿಸಿದ,ಅಲ್ಲ ಗೆಳೆಯ ನೀನು ಯಾವಾಗಲೂ ಏನೋ ಗಮನಿಸುತ್ತಿರುವೆ ತದೇಕಚಿತ್ತದಿಂದ ಆಲಿಸುವ ಹಾಗೆ ಇರುತ್ತೀಯಲ್ಲ ಯಾಕೆ? ಅದು ಹೇಗೆ ವಿಶಾಲವಾಗಿ ತಿಳಿಸಿ ಎಂದನು .ಹೌದ ಕೇಳು ಗೆಳೆಯ ಅತ್ಯಂತ ಬಡ ಕುಟುಂಬದಲ್ಲಿ ಹುಟ್ಟಿದ ವಿದ್ಯಾರ್ಥಿ ನಾನು, ನನಗೆ 20 ವರ್ಷ ಆದಮೇಲೆ ನನ್ನ ಜೀವನವು ಹೀಗೆ ಇರಬೇಕು ಎಂದು ಕನ್ಫ್ಯೂಸಿಯಸ್ ಮಾತುಗಳನ್ನು ನೆನಪಿಸುತ್ತದೆ, ಅದೇನೆಂದರೆ ನಿಮ್ಮ ಯೋಜನೆಯ ಒಂದು ವರ್ಷದ್ದಾಗಿದ್ದರೆ ಭತ್ತ ಬೆಳೆಯಿರಿ, ಹತ್ತು ವರ್ಷಗಳದ್ದಾಗಿದ್ದರೆ ಮರಗಳನ್ನು ಬೆಳೆಸಿ ,ನೂರು ವರ್ಷಗಳಗಿದ್ದರೆ ನಿಮ್ಮ ಮಕ್ಕಳಿಗೆ ಖಂಡಿತವಾಗಿ ಶಿಕ್ಷಣ ಕೊಡಿ .ಎನ್ನುವಂತೆ ಮಾತುಗಳು ನನ್ನ ಪೂರ್ಣ ದೃಷ್ಟಿಗೆ ಪೂರಕವಾದವು. ಶಿಕ್ಷಕರ ಹೇಳುವ ಪ್ರತಿಯೊಂದು ಮಾತುಗಳು ದೇವವಾಣಿಯಂತೆ ಹಾಗೆ ನನ್ನನ್ನು ಹೊಸ ಲೋಕಕ್ಕೆ ಕರೆದುಕೊಂಡು ಹೋಗಿ ಸಾಮಾಜಿಕ ಕಾಳಜಿ ಮೂಡಿತು ಅದರಂತೆ ನಾನು ಮಾಡಿದರೆ ಬಡತನದ ಸಂಘರ್ಷವೇ ಅಂತ್ಯಕಂಡು ಸುಂದರ ಬದುಕಿಗೆ ನಾಂದಿ ಹಾಡುತ್ತದೆ. ಅರಿವು ಅಕ್ಷರದ ಮಧ್ಯ ಬದುಕಿನ ಸಂಭ್ರಮವು ಈ ಜೀವನದಲ್ಲಿ ನಾವು ಕಾಣಬೇಕಾಗುತ್ತದೆ. ಕಗ್ಗತ್ತಲ ಕಾಡಿನಲ್ಲಿ ಇರುವ ನನ್ನ ಊರು ಸರ್ವ ಜನಾಂಗದ ಶಾಂತಿ ತೋಟವಾಗಬೇಕು, ಸರ್ವ ಕ್ಷೇತ್ರದಲ್ಲೂಅಭಿವೃದ್ಧಿಹೊಂದಬೇಕು.ಜನವಾಸಕ್ಕೆಅನುಕೂಲವಾಗುವ ಆಸ್ಪತ್ರೆ, ಮಾರುಕಟ್ಟೆ, ಕೈಗಾರಿಕೆ ಇದ್ದು, ಉದ್ಯೋಗವಿಲ್ಲದೆ ನಿರುದ್ಯೋಗದ ಆಯಾಸ ತೊರೆಯಬೇಕು. ಅನ್ನದ ಆಶ್ರಯವಿಲ್ಲದ ಜನರಿಗೆ ಮುಷ್ಟನ್ನ ದೊರೆಯಬೇಕು. ನಾವು ಇನ್ನೊಬ್ಬರಿಗೆ ಕೈ ಚಾಚುವ ಬದಲಾಗಿ ಕೈ ನೀಡಿ ದಾನ, ಧರ್ಮ ಮಾಡುವ ಧರ್ಮಸ್ಥಳವಾಗಬೇಕು. ಅನ್ನ, ಅಕ್ಷರ ,ಉದ್ಯೋಗವಿಲ್ಲದೆ ಚಿಂತೆಯಲ್ಲಿ ಕೊರಗಿ ಕರಗಬಾರದು . ಈ ಊರಲ್ಲಿ ಯಾರಿಗಾದರೂ ಹಸಿವು ಆದರೆ ಹಸಿವು ಕಳಿಯುವುದಕ್ಕೆ ದಾಸ, ಶರಣರ, ಮಠವು ಕೂಡ ಇಲ್ಲ. ಮಠವಿಲ್ಲದ ಊರಲ್ಲಿ ಬಡತನವೇ ಹಠ ತೊಟ್ಟು ಕುಣಿಯುತ್ತದೆ. ಅದಕ್ಕೆಂದೆ ನಾನು ಬದುಕಿ ಬಾಳುವ ಊರಲ್ಲಿ ಅಕ್ಷರ ಕಲಿತು ಸುಸಂಸ್ಕೃತ ನಾಗರಿಕರಾಗಿ, ಬಾಳಲು ಅಕ್ಷರ ಜ್ಞಾನ ಬೇಕು. ಅದಕ್ಕೆ ಉತ್ತಮ ಕಲಿಕೆಗೆ ದೇವಸ್ಥಾನದ ಘಂಟೆಕ್ಕಿಂತ ಶಾಲೆಗಳ ಗಂಟೆ ಬಾರಿಸಬೇಕು. ಆ ಸತ್ತು ನಲ್ಲೆ ಪುನರ್ಜನ್ಮ ನೀಡುವ ಆಸ್ಪತ್ರೆ ,ಉದ್ಯೋಗ, ಕೃಷಿ ,ಕೈಗಾರಿಕೆ ಹೊಸ ಹೊಸ ಉದ್ಯಮಗಳು ಆಧುನಿಕತೆಗೆ ತಕ್ಕಂತೆ ಅಭಿವೃದ್ಧಿಪಥದ ಕಡೆ ಸಾಗಲು ಶಿಕ್ಷಣ ಸಂಸ್ಥೆಗಳು ದೂರದ ಊರಲ್ಲಿ ಏಕೆ ಇರಬೇಕು?, ಬದಲಾಗಿ ಅವು ನಮ್ಮ ಊರಲ್ಲೇ ಬರಲಿ ಹೊಟ್ಟೆ ತುಂಬುವುದಕ್ಕೆ ನಾಚಿಕೆಯು ದೂರವಿಡಬೇಕು. ಬದುಕುವದಕ್ಕೆ ಅದು ಬರುವದಾದರೆ ನನ್ನ ಊರಿಗೆ ಬರಲಿ. ಸಕಲವು ಕೊಳ್ಳಲು ನನ್ನ ಊರಿಗೆ ಬಂದು ಖರೀದಿಸಿ ಕನಕಗಿರಿಯಾಗಿ ಬೆಳೆಯಲಿ. ನನ್ನ ಊರು ಅನ್ನ ,ನೀರು, ಆರೋಗ್ಯ ,ರಕ್ಷಣೆಯ ಸಾಮಾಜಿಕ ಕಾಳಜಿ ಹೊಂದಿ ಪೂರ್ಣದೃಷ್ಟಿಯ ಶಿಕ್ಷಣವನ್ನು ನಾನು ಕಲಿತು ಜೊತೆಗೂ ನೀವು ಕಲಿತು ಪ್ರಮುಖ ಉದ್ಯೋಗಗಳಾದ ಪ್ರಾಣ ಉಳಿಸುವ ವೈದ್ಯಕೀಯದಲ್ಲಿ ಹೆಚ್ಚು ಪ್ರಾವಿಣ್ಯತೆ ಹೊಂದಬೇಕು. ಹಾರಿಹೋಗುವ ಪ್ರಾಣವನ್ನು ಮತ್ತೆ ಮರುಜೀವ ನೀಡಿ ನಂದನವನದಲ್ಲಿ ಅರಳುವ ಹೂವಾಗಿ ಆ ರೋಗಿಯು ಸಂತೋಷದಿಂದಲೇ ಬಾಳಬೇಕು. ಬುದ್ದ ,ಬಸವ, ಗಾಂಧಿ ಅಂಬೇಡ್ಕರಂತೆ ನಾವು ತತ್ವ ಅರಿತು ಸಾತ್ವಿಕರಾಗಿ ಬಾಳಲು, ನಾನು ಇಂದು ನಮ್ಮ ಗುರುಗಳ ಪಾಠವನ್ನು ತದೇಕಚಿತ್ತ್ದಿಂದ ಆಲಿಸಿ ಅರಿತು ಮನನ ಮಾಡಿಕೊಂಡು ಕಠಿಣ ಶ್ರಮ ಹಾಕಿ ಓದುತ್ತಿದ್ದೇನೆ .ನನ್ನ ಮನೆ ಅಲ್ಲದೆ ಪ್ರತಿಯೊಬ್ಬರ ಮನೆಯಲ್ಲೂ ಅನ್ನ ,ಅಕ್ಷರ, ದಾಸೋಹ ನಡೆಯಬೇಕು.ನಮ್ಮ ಊರಿನ ಗೃಹ ,ಗುಡಿ ಕೈಗಾರಿಕೆ ಉದ್ಯಮಗಳಲ್ಲಿ ಕೆಲಸ ಪಡೆದು ಉದ್ಯೋಗ ಹೊಂದಿ ನೆಮ್ಮದಿ ಜೀವನ ಕಂಡುಕೊಳ್ಳಬೇಕು. ಇದಕ್ಕೆ ನಾನು ಎಂದು ಪೂರ್ಣದೃಷ್ಟಿಯಲ್ಲಿ ಪಾಠ ಕಲಿತು ಮುಂದಿನ ಭವಿಷ್ಯದ ಜೀವನದಲ್ಲಿ ಆಸೆ ಪೂರ್ಣಗೊಂಡು ನನ್ನ ಆಶಯಗಳು ಅಕ್ಷರಜ್ಞಾನದಿಂದಲೇ ಎಲ್ಲಿಗೆ ಬೇಕಾದರೂ ಹೋಗುತ್ತೇನೆ, ಎಲ್ಲಿ ಬೇಕಾದರೂ ಬದುಕುತ್ತೇನೆ, ಎಷ್ಟು ಎತ್ತರ ಬೇಕಾದರೂ ಬೆಳೆಯುತ್ತೇನೆ, ಆಲಸ್ಯ ತೊರೆದು ಚೈತನ್ಯ ಪುರುಷನಾಗಿ ಇತಿಹಾಸದಲ್ಲಿ ಭವಿಷ್ಯದ ಕಣ್ಣಿಗೆ ಕಣ್ಣಾಗಿ ನಿಂತು ,ಬೆಳಕಿಗೆ ಬೆಳಕಾಗಿ ನಮ್ಮ ಅಕ್ಷರ ಕಲಿಕೆಯು ಪ್ರೇರಣೆಯಿಂದ ಸ್ಫೂರ್ತಿತುಂಬಿ ಮಾದರಿಯಾಗಿ ನಿಲ್ಲಿಸುತ್ತೇನೆ. ಭಾರತ ಕೃಷಿ ಪ್ರಧಾನ ರಾಷ್ಟ್ರ ಕೃಷಿಕನೇ ಬೆನ್ನೆಲುಬು, ಹಳ್ಳಿಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂದು ಗಾಂಧೀಜಿ ಹೇಳಿದ ಮಾತನ್ನು ನೆನಪಿಸಿಕೊಳ್ಳುತ್ತೇನೆ. ಆದ್ದರಿಂದ ಉದ್ಯೋಗಗಳನ್ನ ಬೆಳೆಸಲು ಆಧುನಿಕತೆಯನ್ನು ಬಳಸಿಕೊಂಡು, ಹಿರಿಯರ ಮಾರ್ಗದರ್ಶನದಲ್ಲಿ ಶ್ರಮಿಕರಾಗಿ ಶ್ರದ್ಧೆಯಿಂದ ದುಡಿದರೆ ಭಾರತವು ಶ್ರೇಷ್ಠ ಮತ್ತು ಶ್ರೀಮಂತರ ರಾಷ್ಟ್ರವಾಗುತ್ತದೆ.ಆದರೆ ಈಗ ವಿದ್ಯಾರ್ಥಿಗಳು ಶಾಲಾ, ಕಾಲೇಜಿಗೆ ಹೋಗದೆ ಮೋಜುಮಸ್ತಿಗೆ ಬಿದ್ದು ಕಲಿಕೆಗೆ ಗಮನಕೊಡದೆ ,ಸಾರ್ವಜನಿಕ ಸ್ಥಳಗಳಲ್ಲಿ ಕಾಲಹರಣ ಮಾಡಿ ತಮ್ಮ ವಯಸ್ಸನ್ನು ಕಳೆದರೆ ತಂದೆ ತಾಯಿ ಗುರುಗಳಾದರು ಏನು ಮಾಡುತ್ತಾರೆ.? ನಮ್ಮ ಹಣೆಬರಾವೆಂದು ಸಮಾಧಾನ ಮಾಡಿಕೊಂಡು ಅಸಮಾಧಾನದಿಂದಲೇ ಬಾಳುತ್ತಾರೆ. ನಾವು ಇಂದು ಯುವಕರಿಗೆ ಮಕ್ಕಳಿಗೆ ಅಸಿ, ಮಸಿ,ಕೃಷಿಯ ಬಗ್ಗೆ ಅಭಿಮಾನ ಮೂಡಿಸಬೇಕಾಗಿದೆ. ಎಂಜಲಿಗೆ ಕೈಚಾಚದೆ ,ಗಂಜಲು ಬಳೆದಾದರು ,ಗಂಜಿ ಉಣ್ಣಬೇಕಾಗಿದೆ. ಪ್ರತಿಯೊಬ್ಬರೂ ಸತ್ಯಂ ,ಶಿವಂ, ಸುಂದರಂ ಎಂಬ ಹಿತನುಡಿಗೆ ಕಾರ್ಯಗತರಾಗಬೇಕಾಗಿದೆ.ಇದ್ದ ಜೀವ ಜೀವನವನ್ನು ಸಂಭ್ರಮಿಸಬೇಕಾದರೆ ಸಹಕಾರ, ಸಹಬಾಳ್ವೆ ಅತ್ಯಗತ್ಯ, ಅಕ್ಷರ ಕ್ರಾಂತಿ ಜೀವನ ಸಮೃದ್ಧಿಗೆ ನಾವು ಇಂದು ಬದ್ಧರಾಗಬೇಕು. ಜ್ಞಾನ ಗಂಗೆಯಾಗಿ ಅಕ್ಷರ ಕ್ರಾಂತಿಯಾಗಿ ಪ್ರತಿಯೊಬ್ಬರ ಜೀವನ ಹಸನಾಗಬೇಕು. ಇದು ಪ್ರತಿಯೊಬ್ಬ ವಿದ್ಯಾರ್ಥಿಗಳು ಗಮನದಲ್ಲಿಟ್ಟುಕೊಂಡು ಕಲಿಯುವ ಆಸಕ್ತಿ ತೋರಿಸಬೇಕು ,ಕಲಿತು ದೇಶದಲ್ಲಿ ಮಾದರಿಯಾಗಬೇಕು.



ಜಿ.ಯರಿಸ್ವಾಮಿ ಸಂಕ್ಲಾಪುರ
ಹೊಸಪೇಟೆ

Hampi Times E-paper
SCAN AND READ

ನಾವು ಸ್ವಾಭಿಮಾನದಿಂದ ಬದುಕಬೇಕು ಎಂಬ ಧ್ಯೇಯವನ್ನು ಇಟ್ಟುಕೊಂಡು ಇಂದು ಓದಿದರೆ ಭವಿಷ್ಯದಲ್ಲಿ ಉಜ್ವಲವಾಗಿ ಬಾಳುತ್ತೇವೆ. ■

## ಕವಿ ಮನಸು

### ಹಸಿರು ಉಳಿಸದೆ ಹೋದರು

ಹಸಿರೇ ಉಸಿರು ಎಂಬರು
ಹಸಿರು ಮರವ ಕಡಿದರು
ಉಸಿರು ಬೇಕೆಂಬುದ ಮರೆತರು
ಹಸಿರು ಉಳಿಸದೆ ಹೋದರು

ಬಿಸಿಲ ದಗೆಗೆ ಬೆಂದರು
ನೀರಿಗಾಗಿ ಅಲೆದರು
ಹಸಿವೆಯಿಂದ ಸತ್ತರು
ಹಸಿರು ಉಳಿಸದೆ ಹೋದರು

ನಿಂತ ಭೂಮಿ ಬಾಯ್ಬಿಟ್ಟಿತ್ತು
ಅಂತರ್ಜಲ ಬತ್ತಿತು
ಗಾಳಿ ಇಲ್ಲದಂತಾಯಿತು
ಹಸಿರು ಉಳಿಸದೇ ಹೋದರು

ಬರಗಾಲ ಬಂದಾಯಿತು
ಬಿಸಿ ಗಾಳಿ ಶುರುವಾಯಿತು
ಉಸಿರು ಕಟ್ಟುವಂತಾಯಿತು
ಹಸಿರು ಉಳಿಸದೆ ಹೋದರು

– **ಜಿ.ಆರ್. ಬಸವರಾಜೇಶ್ವರಿ**
ಸರ್ಕಾರಿ ಪ್ರೌಢಶಾಲೆ ಹಗರಿಗಜಾಪುರ

### ಮತ್ತೆ ಮಳೆಯಾಗಿದೆ....

ಮತ್ತೆ ಮಳೆಯಾಗಿದೆ
ಎದೆಯ ಕಾದ ನೆಲದ ಮೇಲೆ
ಹನಿ ಪ್ರೀತಿಯ ಹಸಿರು ಚಿಗುರಿದೆ

ಮತ್ತೆ ಮಳೆಯಾಗಿದೆ
ಬರಿದಾದ ಬದುಕ ಬೊಗಸೆಯಲ್ಲಿ
ಹೂಗನಸಿನ ಬಣ್ಣಗಳು ಅರಳಿವೆ

ಮತ್ತೆ ಮಳೆಯಾಗಿದೆ
ಮುದುರಿ ಮಲಗಿದ್ದ ಮನವು
ಖಾಲಿತನವ ಮರೆತಂತೆ
ಮಗುವಾಗಿ ಕುಣಿದಿದೆ

ಮತ್ತೆ ಮಳೆಯಾಗಿದೆ
ಕಟ್ಟಿ ನಿಂತ ನೋವಿನ
ಕಟ್ಟೆಯೊಡೆದು ನಲಿವು
ಹೊನಲಾಗಿ ಹರಿದಿದೆ

ಮತ್ತೆ ಮಳೆಯಾಗಿದೆ
ಚಿತ್ತದ ಭಿತ್ತಿಯಲ್ಲಿ
ನೆನಪುಗಳ ಚಿತ್ರಮಾಲೆ
ತನ್ನತಾನೇ ಮೂಡಿ ನಿಂತಿದೆ....

ಮತ್ತೆ ಮಳೆಯಾಗಿದೆ
ಚಿಂತೆಯಲ್ಲಿ ಕಳೆಗುಂದಿದ
ಮೊಗದಲ್ಲಿ ನಗುವಾಗಿ
ಚೆಲುವಿಗೆ ಮುನ್ನುಡಿ ಬರೆದಿದೆ

– **ಭವ್ಯ ಟಿ.ಎಸ್.**
ಸರ್ಕಾರಿ ಪ್ರೌಢಶಾಲೆ ಕಾನುಗೋಡು
ಹೊಸನಗರ, ಶಿವಮೊಗ್ಗ

### ಜೇಡ ಹೆಣೆದ ಬಲೆ



ಜೇಡ ಹೆಣೆದ ಆಕರ್ಷಕ ಬಲೆ
ಅದರ ಅತ್ಯದ್ಭುತವಾದ ಕಲೆ
ಅತಿ ಸೂಕ್ಷ್ಮ ನೂಲ ಎಳೆ
ಹೆಣೆದ ಪರಿಗೆ ಎಷ್ಟೊಂದು ಬೆಲೆ//

ತನ್ನ ಹೊಟ್ಟೆ ತುಂಬಿಸಲು
ಬೇಕು ಬಲೆಯಲ್ಲಿ ಬಿದ್ದ ಕ್ರಿಮಿಗಳು
ಧೈರ್ಯದಿಂದ ಹೊಂಚು ಹಾಕುತ್ತಾ
ದಿನಾಲು
ತನ್ನ ಬಲೆಗೆ ತಾನೇ ಕಾವಲು//

ನಾವು ಬಲೆಯ ಸ್ಪರ್ಶಿಸಿದಾಗ
ತಾನು ಬಿಟ್ಟ ರಸ ತಾಳ ನುಂಗುವುದಾಗ
ತನ್ನ ಚತುರತೆಯ ಮೆರೆಯುವುದಾಗ
ಮತ್ತೆ ಹೆಣೆಯುವ ಕಾರ್ಯ ಶುರುವಾಗ//

ಜೇಡನು ತಾನು ಹೆಣೆದ ಬಲೆಯಲಿ
ಸಿಕ್ಕಿ ಒದ್ದಾಡುವ ಪರಿಸ್ಥಿತಿಯಲಿ
ಯಾರ ಸಹಾಯ ಸಿಗಲಾರದೆ ತೊಳಲಿ
ತಾನೆಣೆದ ಬಲೆಯೊಳ ಅಂತ್ಯಕಾಣುತಲಿ//

ಬದುಕೆಂಬ ಮಾಯೆಯೊಳು ಜೇಡನ ರೀತಿ
ನಾವು ಸುತ್ತಿ ಸುತ್ತಿ ಒದ್ದಾಡುವ ಫಜೀತಿ
ಆದರೂ ಇದೇ ನಿಜವಾದ ಜೀವನದ ಗತಿ
ನಮಗೆಂದೂ ಬರದಿರಲಿ ಜೇಡನ
ದುರ್ಗತಿ//

– **ಸವಿತಾ ಸತೀಶ್ ಶೆಟ್ಟಿ**, ದಕ್ಷಿಣಕನ್ನಡ

**ನಿಜಕ್ಕೂ ನೋವಾಗುತ್ತಿದೆ. ಅದೆಷ್ಟು ಗಿಡಮರಗಳು ರೋದಿಸುವವೋ, ಅದೆಷ್ಟು ಜೀವಸಂಕುಲಗಳು ಚೀರುವವೋ ಗೊತ್ತಿಲ್ಲ. ಮತ್ತೆ ಇನ್ನು ಅರಣ್ಯ ಪ್ರದೇಶದ ತುಂಬಾ ವಾಹನಗಳ ಗದ್ದಲ, ಸ್ಫೋಟ, ಧೂಳು, ಓಡಾಟ, ಇಡೀ ಪ್ರದೇಶವೆಲ್ಲ....**

# ಮತ್ತೆ ಕೆಂಪಾಗಲಿರುವ ಸಂಡೂರು

ಇದುವರೆಗೂ ಕೆಲವು ವರ್ಷಗಳಿಂದ ನಿಟ್ಟುಸಿರುಬಿಟ್ಟು, ನಿರಾಳವಾಗಿ ಹಸಿರನ್ನು ಉಸಿರಾಡುತ್ತಿದ್ದ ಸಂಡೂರು ಇನ್ನು ಮತ್ತೆ ಕೆಂಪಾಗಲಿದೆ. ಸಂಡೂರಿನಲ್ಲಿ ಗಣಿಗಾರಿಕೆಗೆ ಮತ್ತೆ ಹಸಿರು ನಿಶಾನೆ ತೋರಲಾಗಿದೆ. ಅರಣ್ಯ ಎಷ್ಟು ಮಹತ್ವದ್ದು ಎಂಬ ಯೋಚನೆ ನಮ್ಮಲ್ಲಿ ಬಹುತೇಕ ಜನರಿಗೆ ಇನ್ನೂ ಬಂದಿಲ್ಲ. ಹೀಗಾಗಿ ಅರಣ್ಯದ ಉಳಿವಿನ ಬಗ್ಗೆ ಬೆರಳೆಣಿಕೆಯಷ್ಟು ಜನ ಯೋಚಿಸಿದರೂ, ಕೂಗಿದರೂ ಬಹುಸಂಖ್ಯಾತ ಜನರ ನಡುವೆ ಅದು ಕೇಳಿಸುವುದೇ ಇಲ್ಲ.

ಸಂಡೂರು ಬಳ್ಳಾರಿ ಜಿಲ್ಲೆಯಲ್ಲಿಯೇ "ಇಂಥದ್ದೂ ಒಂದು ಪ್ರದೇಶ ಇದೆಯೇ ?" ಎಂದು ಬೆರಗಾಗುವಂಥ ಪ್ರದೇಶ. ಥೇಟ್ ಮಲೆನಾಡಿನಂತೆಯೇ ಇಲ್ಲಿನ ಗಿಡಮರಗಳು, ಔಷಧೀಯ ಸಸ್ಯಗಳು, ಜೀವಸಂಕುಲ. ಇಲ್ಲಿ ಇನ್ನೂ ಅರಿವಿಗೆ ಬಾರದ ಅದೆಷ್ಟೋ ಔಶಧೀಯ ಗಿಡಮೂಲಿಕೆಗಳಿವೆ, ಜೀವಸಂಕುಲಗಳಿವೆ, ಅಪರೂಪದ ಗಿಡಮರಗಳಿವೆ. ವಿಶೇಷ ಹಾಗೂ ಅಚ್ಚರಿಯ ಸಂಗತಿಯೆಂದರೆ ಮಲೆನಾಡಿನ ಭಾಗದಲ್ಲಿ ಮಾತ್ರ ಕಾಣಸಿಗುವಂಥ ಹನ್ನೆರಡು ವರ್ಷಗಳಿಗೆ ಮಾತ್ರ ಅರಳುವ "ನೀಲಕುರುಂಜಿ" ಹೂಗಳಿವೆ. ಇದನ್ನೆಲ್ಲ ನೋಡಿ ಅಚ್ಚರಿಪಟ್ಟ ನಾನು ಅರಣ್ಯಾಧಿಕಾರಿಯೊಬ್ಬರ ಬಳಿ "ಥೇಟ್ ಮಲೆನಾಡನ್ನೇ ನೆನಪಿಸುವ ಇಂಥ ಪ್ರದೇಶ ಬಳ್ಳಾರಿ ಜಿಲ್ಲೆಯಲ್ಲಿ ಅದು ಹೇಗೆ ಸಾಧ್ಯ ?" ಎಂದು ಪ್ರಶ್ನಿಸಿದ್ದೆ. ಅವರೇ ಹೇಳಿದಂತೆ "ಬಹುಶ: ಸಹಸ್ರಾರು ವರ್ಷಗಳ ಹಿಂದೆ ಉಲ್ಕೆಯಿಂದಲೋ ಅಥವಾ ಯಾವುದೋ ಬದಲಾವಣೆಯಿಂದಲೋ ಮಲೆನಾಡು ಭಾಗದ ಒಂದಷ್ಟು ಭೂಭಾಗ ಸಿಡಿದು ಇಲ್ಲಿ ಬಿದ್ದಿರಲೂಬಹುದು ಎಂಬ ಊಹೆಯಿದೆ. ಇಲ್ಲದಿದ್ದರೆ ಅದೇ ರೀತಿಯ ಪ್ರದೇಶ ಅದೂ ಕೆಲವೇ ಕಿ.ಮೀ ಗಳಷ್ಟು ವ್ಯಾಪ್ತಿಯಲ್ಲಿ ಇಲ್ಲಿ ಇರೋದಕ್ಕೆ ಸಾಧ್ಯವೇ ಇಲ್ಲ" ಎಂದು ಹೇಳಿದರು. ಅದೊಂದು ಊಹೆಯಾದರೂ ಇಲ್ಲಿನ ಭೂಪ್ರದೇಶವನ್ನು ಕಂಡಾಗ ಇದ್ದರೂ ಇರಬಹುದೇನೋ ಅನಿಸಿದ್ದು ಸುಳ್ಳಲ್ಲ.

ಇನ್ನು ಎಷ್ಟು ಅಪರೂಪದ ಗಿಡಮರಗಳ ಹನನ ಶುರುವಾಗುವುದೋ, ಎಷ್ಟು ಜೀವಸಂಕುಲಗಳು ಭೂಮಿಯಿಂದಲೇ ಒರೆಸಿಹಾಕಲ್ಪಡುವವೋ, ಎಷ್ಟು ಔಷಧೀಯ ಸಸ್ಯಗಳು ಹೇಳಹೆಸರಿಲ್ಲದಂತೆ ಕಣ್ಮರೆಯಾಗುವವೋ ಗೊತ್ತಿಲ್ಲ.

ಅರಣ್ಯ ಎಂದರೆ ಅದೊಂದು ಜೈವಿಕ ಕಾರ್ಖಾನೆ ಇದ್ದಂತೆ. ಸಣ್ಣ ಕೀಟಗಳಿಂದ ಹಿಡಿದು ದೊಡ್ಡ ಜೀವಿಗಳವರೆಗೆ, ಪಾಚಿಯಿಂದ ಹಿಡಿದು ಎತ್ತರದ ಗಿಡಮರಗಳವರೆಗೂ, ಸಣ್ಣ ಮಳೆಹನಿಯಿಂದ ಹಿಡಿದು ಆಗಸದಿಂದ ಮಳೆ ಸುರಿಯುವಂತೆ ಸೆಳೆಯುವ









ವಾತಾವರಣದವರೆಗೂ ಒಂದು ಸಮತೋಲನದ ನಿಸರ್ಗ ಕ್ರಿಯೆ ಏರ್ಪಟ್ಟಿರುತ್ತದೆ. ಇದು ಕೆಲವೇ ವರ್ಷಗಳಲ್ಲಿ ಆಗುವಂಥದ್ದಲ್ಲ. ಸಾವಿರಾರು ವರ್ಷಗಳಿಂದಲೂ ಈ ಪ್ರಕ್ರಿಯೆ ನಡೆದೂ ನಡೆದೂ ಒಂದು ಹಂತಕ್ಕೆ ಬಂದಿರುತ್ತದೆ. ಈಗ ಗಣಿಗಾರಿಕೆಯ ಹೆಸರಿನಲ್ಲಿ ಇವೆಲ್ಲವನ್ನೂ ಒರೆಸಿಹಾಕಿದರೆ, ಇವನ್ನೆಲ್ಲ ಮತ್ತೆ ರೂಪಿಸುವುದಾಗಲೀ, ರಚಿಸುವುದಾಗಲೀ ನಮ್ಮಿಂದ ಸಾಧ್ಯವೇ ? "ಗಿಡಮರಗಳನ್ನು ಕಡಿದರೆ, ಅದರ ಬದಲಾಗಿ ಸಸಿಗಳನ್ನು ನೆಡಲು ಗಣಿಗಾರಿಕೆಯ ಕಂಪನಿಗಳು ಒಪ್ಪಿಗೆ ನೀಡಿವೆ" ಎನ್ನಲಾಗಿದೆ. ಕಂಪನಿಗಳು ಸಸಿಗಳನ್ನು ನೆಡುತ್ತವೆ ಕಾಡನ್ನಲ್ಲ ಎಂಬ ಸತ್ಯ ಯಾಕೆ ಇವರಿಗೆ ಮನವರಿಕೆ ಆಗುತ್ತಿಲ್ಲವೋ ಗೊತ್ತಿಲ್ಲ.

ನನಗೆ ಅರಣ್ಯಾಧಿಕಾರಿಯೊಬ್ಬರು ಹೇಳಿದ ಮಾತು ಮತ್ತೆ ಮತ್ತೆ ನೆನಪಾಗುತ್ತಿದೆ. "ನಾವು ಏನೇ ಮಾಡಿದರೂ ಸಸಿಗಳನ್ನು ನೆಟ್ಟು ಗಿಡಗಳನ್ನು ಬೆಳೆಸಬಹುದೇ ಹೊರತು ಕಾಡನ್ನು ಬೆಳೆಸುವುದು ಖಂಡಿತ ಸಾಧ್ಯವಿಲ್ಲ" ಎಂಬುದು. ಯಾಕೆಂದರೆ ನೂರಾರು, ಸಾವಿರಾರು ವರ್ಷಗಳಿಂದ ಅರಣ್ಯ ತನ್ನಷ್ಟಕ್ಕೆ ತಾನೇ ಬೆಳೆದಂಥದ್ದು. ಇಲ್ಲಿ ಯಾರ ಪರಿಶ್ರಮ, ನೆಡುವುದು, ಗೊಬ್ಬರ ಹಾಕುವುದು, ಪಾಲನೆ ಮಾಡುವ ಅಗತ್ಯವೇ ಇಲ್ಲ. ತನ್ನಷ್ಟಕ್ಕೆ ತಾನೇ ಬೆಳೆಯುತ್ತಿರುವ ಅರಣ್ಯ ಇರುವಾಗ ಇಷ್ಟೆಲ್ಲ ಮಾಡಿ ಗಿಡಗಳನ್ನು ನೆಟ್ಟು ಅದರ ಪಾಲನೆ ಮಾಡುತ್ತೇವೆನ್ನುವುದು ಆಡೋಣ, ಕೆಡಿಸೋಣ ಎಂಬಂತೆಯೇ.

ನಿಜಕ್ಕೂ ನೋವಾಗುತ್ತಿದೆ. ಅದೆಷ್ಟು ಗಿಡಮರಗಳು ರೋದಿಸುವವೋ, ಅದೆಷ್ಟು ಜೀವಸಂಕುಲಗಳು ಚೀರುವವೋ ಗೊತ್ತಿಲ್ಲ. ಮತ್ತೆ ಇನ್ನು ಅರಣ್ಯ ಪ್ರದೇಶದ ತುಂಬಾ ವಾಹನಗಳ ಗದ್ದಲ, ಸ್ಫೋಟ, ಧೂಳು, ಓಡಾಟ, ಇಡೀ ಪ್ರದೇಶವೆಲ್ಲ ನೂರಾರು ವರ್ಷಗಳಾದರೂ ಏನೂ ಬೆಳೆಯದ ಬರೀ ಧೂಳು ತುಂಬಿದ ಬೆಂಗಾಡಾಗುವುದರಲ್ಲಿ ಸಂದೇಹವೇ ಇಲ್ಲ.



ಸಿದ್ದರಾಮ ಕೂಡ್ಲಿಗಿ
ಹಿರಿಯ ಪತ್ರಕರ್ತರು

Hampi Times E-paper
SCAN AND READ





# ಬದುಕಿನ ವೈಭವಕ್ಕೆ.....ಬೇಕಾಗಿದೆ ಹೊಸ ಭಾಷ್ಯ

ಬದುಕಿನ ವೈಭವವನ್ನು ಕೈಯಲ್ಲಿ ಕಟ್ಟಿರುವ ದುಬಾರಿ ವಾಚುಗಳಲ್ಲಿ, ಹಿಡಿದಿರುವ ಮೊಬೈಲುಗಳಲ್ಲಿ ನೋಡಬೇಡ. ವಾಚುಗಳು ಸಮಯವನ್ನು ತೋರಿಸುತ್ತವೆಯೇ ಹೊರತು ನಮ್ಮ ಬದುಕನ್ನು ಬದಲಿಸುವ ಶಕ್ತಿ ಇರುವುದು ಕೇವಲ ಸಮಯಕ್ಕೆ ಹೊರತು ನಾವು ಕಟ್ಟಿರುವ ವಾಚುಗಳಿಗಲ್ಲ. ಮೊಬೈಲ್ ಕೂಡ ಇರುವುದು ನಮ್ಮ ಉಪಯೋಗಕ್ಕೆ ಹೊರತು ತೋರಿಕೆಯ ಡಂಬಾಚಾರಕ್ಕಲ್ಲ ಬದುಕಿನ ವೈಭವವನ್ನು ಐಷಾರಾಮಿ ಪ್ರಯಾಣಗಳಲ್ಲಿ ನೋಡಬೇಡ, ಐಷಾರಾಮಿ ವಾಹನ ನಮ್ಮನ್ನು ನಮ್ಮ ಗಮ್ಯಸ್ಥಾನಕ್ಕೆ ತಲುಪಿಸುತ್ತದೆಯೇ ಹೊರತು ನಮ್ಮ ಬದುಕಿನ ದಿಕ್ಕನ್ನು ನಿರ್ಧರಿಸುವುದಿಲ್ಲ.

ಬದುಕಿನ ವೈಭವ ನೀನು ತಿನ್ನುವ ಆಹಾರದ ಉತ್ಕೃಷ್ಟತೆಯಲ್ಲಿಲ್ಲ... ಒಳ್ಳೆಯ ಭೋಜನ ನಿನ್ನ ಆರ್ಥಿಕತೆಯ ಔನ್ನತ್ಯವನ್ನು ನಿರ್ಧರಿಸುತ್ತದೆಯೇ ಹೊರತು ನಿನ್ನ ಆರೋಗ್ಯವನ್ನು ಅಲ್ಲ. ಬದುಕಿನ ವೈಭವವನ್ನು ಬ್ರಾಂಡೆಡ್ ಬಟ್ಟೆಗಳ ಮೇಲೆ, ಮೈಮೇಲೆ ಹೇರಿಕೊಂಡಿರುವ ಚಿನ್ನ ಮತ್ತು ವಜ್ರದ ಒಡವೆಗಳ, ಬ್ಯಾಂಕಿನಲ್ಲಿರುವ ಅಪಾರ ಮೊತ್ತದ ಹಣದ ಮೇಲೆ ಮೇಲೆ ನಿರ್ಧರಿಸದಿರು..... ಕ್ಷಣಿಕ ತೃಪ್ತಿಯನ್ನು, ತುಸು ಅಹಂಭಾವವನ್ನಲ್ಲದೆ ಅದಾವುದೂ ನಿನಗೆ ಮಾನಸಿಕ ತೃಪ್ತಿಯನ್ನು ತಂದುಕೊಡುವುದಿಲ್ಲ.

ಬದುಕಿನ ವೈಭವವನ್ನು ಬ್ರಾಂಡೆಡ್ ಶೂ ಚಪ್ಪಲಿಗಳಲ್ಲಿ ನೋಡಬೇಡ.... ಅದೆಷ್ಟೇ ಹಣ ಖರ್ಚು ಮಾಡಿ ದುಬಾರಿ ಹರಳುಗಳ ಅಲಂಕಾರ ಮಾಡಿದರೂ ಅವುಗಳನ್ನು ಕಾಲಲ್ಲಿ ಮೆಟ್ಟುತ್ತೇವೆಯೇ ಹೊರತು ತಲೆಯ ಮೇಲೆ ಇಟ್ಟುಕೊಳ್ಳುವುದಿಲ್ಲ. ಬದುಕಿನ ವೈಭವವನ್ನು ಐಷಾರಾಮಿ ಹಾಸಿಗೆಗಳಲ್ಲಿ, ವಾತಾನುಕೂಲಿತ ಕೋಣೆಗಳಲ್ಲಿ ನೋಡಬೇಡ ಅವು ನಿನ್ನ ಸಿರಿವಂತಿಕೆಯನ್ನು ಸೂಚಿಸುತ್ತವೆಯೇ ಹೊಡೆದು ನಿರಾತಂಕವಾದ ಸೊಂಪಾದ ನಿದ್ರೆಯನ್ನಲ್ಲ.

ಬದುಕಿನ ಯಾವುದೇ ವೈಭವಗಳನ್ನು ಅಂಗಡಿಯಲ್ಲಿ ಕೊಳ್ಳಲಾಗುವುದಿಲ್ಲ!!!

ಬದುಕಿನ ಯಾವುದೇ ವೈಭವಗಳನ್ನು ಕೊಡುಗೆಯಾಗಿ ನೀಡಲು ಸಾಧ್ಯವಿಲ್ಲ!!!

ಬದುಕಿನ ಯಾವುದೇ ವೈಭವಗಳು ಐಷಾರಾಮಿ ಔತಣಕೂಟಗಳಲ್ಲಿ ಸಿಗುವುದಿಲ್ಲ!!!

ಬದುಕಿನ ಯಾವುದೇ ವೈಭವಗಳು ಐಷಾರಾಮಿ ವಸ್ತುಗಳಲ್ಲಿ ದೊರೆಯುವುದು ಸಾಧ್ಯವೇ ಇಲ್ಲ!!!

ಬದುಕಿನ ನಿಜವಾದ ವೈಭವ ಇರುವುದು ತಲೆಯ ಮೇಲೆ ಅಪ್ಪ ಅಮ್ಮನ ಆಶೀರ್ವಾದದಲ್ಲಿ, ತಲೆಯ ಮೇಲಿರುವ ನಮ್ಮದೇ ಪುಟ್ಟ ಸೂರಿನಲ್ಲಿ,ನಮ್ಮ ಆರೋಗ್ಯದಲ್ಲಿ, ನಮ್ಮ ಸೌಹಾರ್ದಯುತ ಸಂಬಂಧಗಳಲ್ಲಿ, ನಮ್ಮ ಸ್ನೇಹಿತರ ಜೊತೆಗಿನ ಆತ್ಮೀಯ ಒಡನಾಟದಲ್ಲಿ, ಸಂಗಾತಿಯೊಂದಿಗೆ ಸ್ನೇಹ ಪ್ರೇಮಗಳಲ್ಲಿ,ಮಕ್ಕಳೊಂದಿಗೆ ಆಟ ಪಾಠಗಳಲ್ಲಿ, ಸಂತಸದಲ್ಲಿ, ವೈಭವವಿರುವುದು ಆತ್ಮೀಯರ ಅಪ್ಪುಗೆಯಲ್ಲಿ, ವೈಭವ ಇರುವುದು ಸಂಗಾತಿಯ ಮತ್ತು ಮಕ್ಕಳ ಮುದ್ದಿನಲ್ಲಿ.

ಬದುಕಿನ ನಿಜವಾದ ವೈಭವ ಇರುವುದು ನಮ್ಮವರ ಪ್ರೀತಿಯಲ್ಲಿ, ನಾವು ಗಳಿಸುವ ಗೌರವದಲ್ಲಿ, ವೈಭವವಿರುವುದು ನಮ್ಮ ಮೊಮ್ಮಕ್ಕಳೊಂದಿಗೆ ಒಡನಾಡುವಲ್ಲಿ. ಬದುಕಿನ ಐಷಾರಾಮಿ ವಸ್ತುಗಳು ಬಾಹ್ಯಾಡಂಬರದ ವಸ್ತುಗಳಲ್ಲಿಲ್ಲ... ಮನಸ್ಸಿಗೆ ಉಲ್ಲಾಸಕೊಡುವ ಚೇತೋಹಾರಿ ಬದುಕಿನಲ್ಲಿದೆ. ಇದರ ಅರಿವಿಲ್ಲದ ಎಷ್ಟೋ ಜನ ತಮಗಿಲ್ಲದುದನ್ನು ಕಂಡು ಕರುಬುತ್ತಾರೆ, ಖ್ಯಾತ ಕವಿ ಗೋಪಾಲಕೃಷ್ಣ ಅಡಿಗರ ಕವನದಲ್ಲಿನ ಸಾಲುಗಳಂತೆ "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ" ಎಂಬಂತೆ ಹಲುಬುತ್ತಾರೆ. 94ರ ಹರೆಯದ ಹಾಲಿವುಡ್ ನ ಕ್ಲಿಂಟ್ ಈಸ್ಟ ವುಡ್ ಎಂಬ ನಟ ಹೇಳಿರುವ ಬದುಕಿನ ನಿಜವಾದ ವೈಭವ ನಮ್ಮವರ ಪ್ರೀತಿ ವಿಶ್ವಾಸ ಸ್ನೇಹಿತರ ಒಡನಾಟ ಆತ್ಮೀಯರ ಅಪ್ಪುಗೆ ಮತ್ತು ಮುದ್ದುಗಳಲ್ಲಿದೆ ಎಂಬ ಮಾತುಗಳು ನನ್ನನ್ನು ಈ ಚಿಂತನೆಗೆ ಈಡು ಮಾಡಿದವು.... ತಿಳಿದವರ, ಜ್ಞಾನಿಗಳ ಒಂದು ಮಾತು ಒಂದಿಡೀ ಲೇಖನಕ್ಕೆ ಆಕರವಾಗುತ್ತದೆ ಎಂದರೆ ಅಚ್ಚರಿಯೇನಲ್ಲ.

ಬಾಹ್ಯಾಡಂಬರದ ಸೆಳೆತಗಳನ್ನು ಬಿಟ್ಟು, ಇರುವುದನ್ನು ಇರುವಂತೆಯೇ ಒಪ್ಪಿಕೊಂಡು ಅಪ್ಪಿಕೊಳ್ಳುವುದರಲ್ಲಿ ಮಾನವ ಜನ್ಮದ ಸಾರ್ಥಕತೆ ಇದೆ ಎಂಬುದನ್ನು ಅರಿತು ಅಂತೆಯೇ ಬಾಳಿ ಬದುಕೋಣ... ಅಲ್ಲವೇ?



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ



## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**18–06–2024 – ಮಂಗಳವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಸ್ವಾತಿ |
| ಯೋಗ | : ಶಿವ |
| ಕರಣ | : ವಿಷ್ಟಿ |
| ಸೂರ್ಯೋದಯ | : 05:42:44 |
| ಸೂರ್ಯಾಸ್ತ | : 19:13:41 |
| ರಾಹು | : 15:51–17:32 |
| ಯಮಘಂಡ | : 09:05–10:47 |
| ಗುಳಿಕ | : 12:28–14:10 |

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 17–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.97 ಅಡಿ |
| ಒಳ ಹರಿವು | 944 ಕ್ಯುಸೆಕ್ |
| ಹೊರ ಹರಿವು | 1244 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.070 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1580.74 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 1075 ಕ್ಯುಸೆಕ್ |
| ಸಾಮರ್ಥ್ಯ | 4.842 ಟಿಎಂಸಿ |

# ಹಂಪಿ ತಂಡಕ್ಕೆ ಜಯ

### ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಕ್ರಿಕೆಟ್ । ಡಿಸಿ ದಿವಾಕರ, ಎಸ್ಪಿ ಶ್ರೀಹರಿಬಾಬು ಚಾಲನೆ
### ವಿಜಯನಗರ ಎಲೆವೆನ್ 15 ಓವರ್‌ಗಳಲ್ಲಿ 103 ರನ್ । ಹಂಪಿ ಎಲೆವೆನ್ 15 ಓವರ್‌ಗಳಲ್ಲಿ 104 ರನ್



ಕ್ರೀಡೆಗಳು ಆರೋಗ್ಯ ವೃದ್ಧಿಸುವ ಜೊತೆಗೆ ಪರಸ್ಪರರಲ್ಲಿ ಸಾಮರಸ್ಯ ಬೆಳೆಸಲಿದೆ. ಸದಾ ಒತ್ತಡದ ಮಧ್ಯೆ ಕಾರ್ಯನಿರ್ವಹಿಸುವುದು ಪತ್ರಕರ್ತರು ಸಂಘಟಿತರಾಗಿ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು.

**– ಎಂ.ಎಸ್.ದಿವಾಕರ್, ಜಿಲ್ಲಾಧಿಕಾರಿ.**

ಸೌಹಾರ್ದ ಪಂದ್ಯಾವಳಿಗಳು ಎಲ್ಲರಿಗೂ ಆನಂದ ನೀಡುತ್ತವೆ. ಪ್ರೀತಿ ವಿಶ್ವಾಸವನ್ನು ಮೂಡಿಸುತ್ತವೆ. ಕಷ್ಟಗಳನ್ನು ಮರೆಸುತ್ತವೆ. ಪತ್ರಕರ್ತರ ಒತ್ತಡ ನಿವಾರಣೆಗೆ ಕ್ರೀಡೆಗಳು ಅಗತ್ಯ.

**– ಬಿ.ಎಲ್.ಶ್ರೀಹರಿಬಾಬು, ಎಸ್ಪಿ.**

**ಹಂಪಿ ಟೈಮ್ಸ್ ಹೊಸಪೇಟೆ**

ಪತ್ರಿಕಾ ದಿನಾಚರಣೆ ನಿಮಿತ್ತ ವಿಜಯನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಗರದ ಭಟ್ರಳ್ಳಿ ಆಂಜನೇಯ ದೇವಸ್ಥಾನ ಮೈದಾನದಲ್ಲಿ ಭಾನುವಾರ ಪತ್ರಕರ್ತರಿಗಾಗಿ ಆಯೋಜಿಸಿದ್ದ ಸೌಹಾರ್ದಯುತ ಕ್ರಿಕೆಟ್ ಪಂದ್ಯದಲ್ಲಿ ವಿಜಯನಗರ ಎಲೆವೆನ್ ವಿರುದ್ಧ ಹಂಪಿ ಎಲೆವೆನ್ ತಂಡ 8 ವಿಕೆಟ್‌ಗಳಿಂದ ಭರ್ಜರಿ ಗೆಲುವು ಸಾಧಿಸಿತು.

ಹಂಪಿ ಎಲೆವೆನ್ ತಂಡ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹೀಗಾಗಿ ಮೊದಲು ಬ್ಯಾಟ್ ಮಾಡಿದ ವಿಜಯನಗರ ಎಲೆವೆನ್ ತಂಡ 15 ಓವರ್ ನಲ್ಲಿ 6 ವಿಕೆಟ್ ನಷ್ಟಕ್ಕೆ 103 ರನ್ ಪೇರಿಸಿತು. ತಂಡದ ನಾಯಕ ಜಯಪ್ಪ ರಾಥೋಡ್ ವೈಯಕ್ತಿಕವಾಗಿ 59 ರನ್ ಗಳಿಸಿದರು. ತಂಡದ ಪರವಾಗಿ ಕಿಚಿಡಿ ಕೊಟ್ರೇಶ್, ಸುರೇಶ ಚವ್ಹಾಣ್, ಸಂಜಯ ಕುಮಾರ್, ವೀರೇಶ್, ಪ್ರಕಾಶ, ಮತ್ತಿತರರು ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು.

ನಂತರ ಗುರಿಯ ಬೆನ್ನಟ್ಟಿದ ಹಂಪಿ ಎಲೆವೆನ್ ತಂಡ 15 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 104 ರನ್ ಗಳಿಸಿ, ಗೆಲುವಿನ ಕೇಕೆ ಹಾಕಿತು. ಅನೂಪ್ ಕುಮಾರ್ 46 ರನ್‌ಗಳೊಂದಿಗೆ ತಂಡವನ್ನು ಗೆಲುವಿನ ದಡ ಸೇರಿಸಿದರು. ತಂಡದ ನಾಯಕ ವಿಜಯ ಕುಮಾರ್, ಶಂಕರ್‌ದಾಸ್, ಅಂಬರೀಶ್ ವಾಲ್ಮೀಕಿ, ಲವಾ ಕೆ. ವೀರೇಂದ್ರ ನಾಗಲದಿನ್ನಿ ಇನ್ನಿತರರು ಬ್ಯಾಟ್ ಬೀಸಿ ತಂಡದ ಗೆಲುವಿಗೆ ಜೊತೆಯಾದರು.

ಅನಂತಪದ್ಮನಾಭ ರಾವ್ ಮತ್ತು ಆನಂದ್ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದರು.

**ಗಮನ ಸೆಳೆದ ಎಸ್ಪಿ, ಡಿಸಿ ಬ್ಯಾಟಿಂಗ್, ಬೌಲಿಂಗ್:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಆಯೋಜಿಸಿದ್ದ ಕ್ರಿಕೆಟ್ ಪಂದ್ಯದ ಉದ್ಘಾಟನೆಗೆ ಆಗಮಿಸಿದ್ದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ತಾವು ಕೂಡಾ ಕೆಲಕಾಲ ಪತ್ರಕರ್ತರೊಂದಿಗೆ ಕ್ರಿಕೆಟ್ ಆಡಿ, ಸಂಭ್ರಮಿಸಿದರು.

ಮೊದಲಿಗೆ ಎಸ್ಪಿ ಮತ್ತು ಡಿಸಿ ಉತ್ತಮ ಜೊತೆಯಾಟ ಪ್ರದರ್ಶಿಸಿದರು. ನಂತರ ಪರಸ್ಪರ ಬ್ಯಾಟಿಂಗ್ ಮತ್ತು ಬೌಲಿಂಗ್ ಮಾಡಿ, ಕ್ರಿಕೆಟ್ ಕೌಶಲ್ಯವನ್ನು ಪ್ರದಶಿಸಿದರು. ತಮ್ಮ ಬಿಡುವಿಲ್ಲದ ಸಮಯದಲ್ಲೂ ಎಸ್ಪಿ ಶ್ರೀಹರಿ ಬಾಬು ಅವರು ಮೊದಲಾರ್ಧದವರೆಗೂ ಪಂದ್ಯವನ್ನು ವೀಕ್ಷಿಸಿ, ಕ್ರೀಡಾಪಟುಗಳನ್ನು ಹುರಿದುಂಬಿಸಿದರು. ವಿಜೇತ ಮತ್ತು ರನ್ನರ್ ಅಪ್ ತಂಡಗಳಿಗೆ ಟ್ರೋಫಿ ಕೊಡುಗೆಯಾಗಿ ನೀಡಿದರು.

**ಟ್ರೋಫಿ ವಿತರಣೆ:** ಪಂದ್ಯಾಟದ ಬಳಿಕ ವಿಜೇತ ಹಂಪಿ ಎಲೆವೆನ್ ತಂಡದ ನಾಯಕ ವಿಜಯಕುಮಾರ್ ಹಾಗೂ ಸಂಗಡಿಗರಿಗೆ ಅದರಂತೆ ರನ್ನರ್ ಅಪ್ ತಂಡದ ನಾಯಕ ಜಯಪ್ಪ ರಾಥೋಡ್ ಹಾಗೂ ಸಂಗಡಿಗರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಪಿ.ವೆಂಕೋಬಿ ನಾಯಕ, ಜಿಲ್ಲಾಧ್ಯಕ್ಷ ಪಿ.ಸತ್ಯನಾರಾಯಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಲಕ್ಷ್ಮಣ ಹಾಗೂ ಹಿರಿಯ ಪತ್ರಕರ್ತೆ ರೇಖಾ ಪ್ರಕಾಶ್ ಟ್ರೋಫಿ ವಿತರಿಸಿ, ಶುಭ ಕೋರಿದರು



## ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ನಿಗದಿ ಪಡಿಸಿರುವ ಶುಲ್ಕದ ವಿವರ ಪ್ರಕಟಿಸಲು ಸೂಚನೆ

**ಹಂಪಿ ಟೈಮ್ಸ್ ಕೊಪ್ಪಳ**

ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ನಿಗದಿಪಡಿಸಿರುವ ಶುಲ್ಕದ ವಿವರ ಪ್ರಕಟಿಸಲು ಎಲ್ಲಾ ತಾಲ್ಲೂಕಿನ ವಲಯ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇರಿದಂತೆ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಸೂಚನೆ ನೀಡಿದ್ದಾರೆ.

ಖಾಸಗಿ ಅನುದಾನರಹಿತ ಶಾಲೆಗಳಲ್ಲಿ 2024–25ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ದಾಖಲಾತಿ ಮತ್ತು ಶುಲ್ಕ ವಸೂಲಾತಿ ಪ್ರಕ್ರಿಯೆ ಪ್ರಾರಂಭವಾಗಿರುತ್ತದೆ. ದಾಖಲಾತಿ ಪ್ರಕ್ರಿಯೆ, ದಾಖಲಾತಿ ಶುಲ್ಕ ಮತ್ತು ಇನ್ನಿತರೆ ಶುಲ್ಕವನ್ನು ಪಡೆಯುವ ಸಂಬಂಧ ಶಿಕ್ಷಣ ಹಕ್ಕು ಕಾಯಿದೆ–2009 ರನ್ವಯ ಕ್ರಮ ವಹಿಸಲು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಮೇ ಮಾಹೆಯಲ್ಲಿಯೇ ಸುತ್ತೋಲೆ ಹೊರಡಿಸಿ ಸೂಚನೆ ನೀಡಿದ್ದಾರೆ. ಈ ಸುತ್ತೋಲೆಯಲ್ಲಿ ತಿಳಿಸಿದಂತೆ ಅಗತ್ಯ ಕ್ರಮ ವಹಿಸಲು ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆಯಾ ತಾಲ್ಲೂಕಿನ ಖಾಸಗಿ ಶಾಲೆಗಳ ಮುಖ್ಯಸ್ಥರಿಗೆ ಸುತ್ತೋಲೆಯ ಮಾಹಿತಿಯನ್ನು ತಿಳಿಸಿ ಅಗತ್ಯ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

ಶಿಕ್ಷಣ ಹಕ್ಕು ಕಾಯ್ದೆ–2009 ರ ಸೆಕ್ಷನ್–2(ಬಿ) ರಂತೆ ಎಲ್ಲಾ ಖಾಸಗಿ ಶಾಲೆಗಳು ತಾವು ಅಧಿಸೂಚಿಸಿದ ಶುಲ್ಕವನ್ನು ತಮ್ಮ ಶಾಲಾ ಜಾಲತಾಣದಲ್ಲಿ, ಶಾಲಾ ಸೂಚನಾ ಫಲಕದಲ್ಲಿ ಮತ್ತು ಇಲಾಖಾ ಜಾಲತಾಣದಲ್ಲಿ (ಎಸ್.ಎ.ಟಿ.ಎಸ್) ಸಾರ್ವಜನಿಕರು ಮತ್ತು ಪೋಷಕರಿಗೆ ಲಭ್ಯವಾಗುವಂತೆ ಪ್ರಕಟಪಡಿಸಲು ಹಾಗೂ ಶುಲ್ಕ ವಸೂಲಾತಿ ಮತ್ತು ವಿದ್ಯಾರ್ಥಿಗಳ ದಾಖಲಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಕ್ಷನ್–13ರ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ತಿಳಿಸಿದೆ. ಯಾವುದೇ ಶಾಲೆಗಳು ಸೆಕ್ಷನ್–2(ಬಿ) ಮತ್ತು ಸೆಕ್ಷನ್ 13(1) ಅನ್ನು ಉಲ್ಲಂಘಿಸಿರುವ ಬಗ್ಗೆ ದೂರುಗಳು ದಾಖಲಾದಲ್ಲಿ, ಸೆಕ್ಷನ್ 13(2)ಎ ಮತ್ತು ಸೆಕ್ಷನ್ 13(2)ಬಿ ರಂತೆ ಹಾಗೂ ಕರ್ನಾಟಕ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ಹಕ್ಕು ನಿಯಮಗಳು–2012 ರ ನಿಯಮ–23ರಲ್ಲಿ ತಿಳಿಸಿದಂತೆ ಅಗತ್ಯ ಕ್ರಮವಹಿಸಲು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರಿಗೆ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಸೂಚಿಸಿದಂತೆ ಅಗತ್ಯ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ವಿವೇಕಶ್ರೇಯಾಲಾಪ ಸಂಗೀತ ತರಬೇತಿ ಕೇಂದ್ರ
VEENA INSTRUMENTAL | VOCAL - KARNATIC | AND FILM MUSIC Classes
Contact: 91082 26938 - 90368 65666

# ಕಲ್ಯಾಣ ಕರ್ನಾಟಕದ 872 ಶಾಲೆಯಲ್ಲಿ ದ್ವಿಭಾಷದಲ್ಲಿ ಬೋಧನೆ: ಡಾ.ಆಕಾಶ್.ಎಸ್

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರಾಥಮಿಕ ಶಿಕ್ಷಣ ಹಂತದಲ್ಲಿಯೇ ಗುಣಾತ್ಮಕ ಶಿಕ್ಷಣ ನೀಡಲು ಪ್ರಮುಖ ಹೆಜ್ಜೆ ಇಟ್ಟಿರುವ ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಭಾಗದ ಅರ್ಹ 872 ಸರ್ಕಾರಿ ಶಾಲೆಗಳಲ್ಲಿ ಪ್ರಸಕ್ತ 2024–25ನೇ ಶೈಕ್ಷಣಿಕ ಸಾಲಿನಿಂದ 1ನೇ ತರಗತಿಯಿಂದಲೆ ಮಕ್ಕಳಿಗೆ ದ್ವಿಭಾಷಾ (ಕನ್ನಡ ಮತ್ತು ಇಂಗ್ಲಿಷ) ತರಗತಿಗಳನ್ನು ಪ್ರಾರಂಭಿಸಲು ಆದೇಶಿಸಿದೆ ಎಂದು ಶಾಲಾ ಶಿಕ್ಷ ಇಲಾಖೆಯ ಕಲಬುರಗಿ ವಿಭಾಗದ ಅಪರ ಆಯುಕ್ತ ಡಾ.ಆಕಾಶ ಎಸ್. ಅವರು ತಿಳಿಸಿದ್ದಾರೆ.



ಬೀದರ–97, ಬಳ್ಳಾರಿ–119, ಕಲಬುರಗಿ–165, ಕೊಪ್ಪಳ–109, ರಾಯಚೂರು–176, ವಿಜಯನಗರ –134 ಹಾಗೂ ಯಾದಗಿರಿ–72 ಸೇರಿ ಒಟ್ಟಾರೆ 872 ಶಾಲೆಗಳಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 1ನೇ ತರಗತಿಯಿಂದ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಬೋಧಿಸಲಾಗುತ್ತದೆ. ಅಲ್ಲದೆ ಪ್ರದೇಶದ 7 ಜಿಲ್ಲೆಗಳ ಆಯ್ದ 872 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ (ಕನ್ನಡ ಮತ್ತು ಇಂಗ್ಲಿಷ) ತರಗತಿಗಳನ್ನು ಪ್ರಾರಂಭಕ್ಕೆ ಶಾಲಾ ಹಂತದಲ್ಲಿಯೆ ನಿಯಮಾನುಸಾರ ಅತಿಥಿ ಶಿಕ್ಷಕರ ನೇಮಕಾತಿ ಸಹ ನಡೆಯಲಿದೆ ಎಂದಿದ್ದಾರೆ.

ರಾಜ್ಯದಲ್ಲಿ ಈಗಾಗಲೇ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧನೆ ಮಾಡುತ್ತಿರುವ ಶಾಲೆಗಳ ಸಂಖ್ಯೆ ನೋಡಿದಾಗ ಬೆಂಗಳೂರು ವಿಭಾಗದಲ್ಲಿ ಅತಿ ಹೆಚ್ಚು 1,291 ಶಾಲೆಗಳಿದ್ದರೆ, ಕಲಬುರಗಿ ವಿಭಾಗದಲ್ಲಿ ಅತೀ ಕಡಿಮೆ 418 ಶಾಲೆಗಳಿವೆ. ಉಳಿದಂತೆ ಮೈಸೂರು, ಧಾರವಾಡ ವಿಭಾಗದಲ್ಲಿ ಕ್ರಮವಾಗಿ 871 ಮತ್ತು 503 ಶಾಲೆಗಳಿವೆ. ಇಲ್ಲಿ ಪ್ರತಿ 1 ಲಕ್ಷ ಮಕ್ಕಳಿಗೆ ಆಂಗ್ಲ ಮಾಧ್ಯಮ ಶಾಲೆಗಳ ಸಂಖ್ಯೆ ನೋಡಿದಾಗ ಮೈಸೂರು–139, ಬೆಂಗಳೂರು–129, ಧಾರವಾಡ–36 ಕಲಬುರಗಿ–33 ಶಾಲೆಗಳಿವೆ ಎಂದು ಅವರು ಅಂಕಿ ಸಂಖ್ಯೆ ಮಾಹಿತಿ ನೀಡಿದರು. ಅದೇ ರೀತಿ ಇತ್ತೀಚಿನ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶವನ್ನು ಅವಲೋಕಿಸಿದಾಗ, ಮೊದಲ 10 ಸ್ಥಾನಗಳು ಧಾರವಾಡ ವಿಭಾಗದ ಶಿರಸಿ, ಕಾರವಾರ ಹೊರತುಪಡಿಸಿದರೆ ಉಳಿದವೆಲ್ಲ ಬೆಂಗಳೂರು, ಮೈಸೂರು ವಿಭಾಗದ ಜಿಲ್ಲೆಗಳಿವೆ. ಅಗ್ರ 10 ಜಿಲ್ಲೆಗಳಲ್ಲಿ ಪ್ರತಿ 1 ಲಕ್ಷ ಮಕ್ಕಳಿಗೆ ಕನಿಷ್ಠ 100 ರಿಂದ ಗರಿಷ್ಠ 200 ಶಾಲೆಗಳಿದ್ದು, ಪ್ರತಿ ಶಾಲೆ ಮೇಲೆ ಅವಲಂಭಿತ ಮಕ್ಕಳ ಸಂಖ್ಯೆ 600 ರಿಂದ 700 ರಷ್ಟಿದೆ. ಕಲ್ಯಾಣ ಕರ್ನಾಟಕ ಪ್ರದೇಶದ ಕಡೆ ದೃಷ್ಟಿ ಹಾಯಿಸಿದಾಗ ಪ್ರತಿ 1 ಲಕ್ಷ ಮಕ್ಕಳಿಗೆ 40ಕ್ಕಿಂತ ಕಡಿಮೆ ಶಾಲೆಗಳಿದ್ದು, ಪ್ರತಿ ಶಾಲೆ ಮೇಲೆ ಅವಲಂಭಿತ ಮಕ್ಕಳ ಸಂಖ್ಯೆ 2 ರಿಂದ 4 ಸಾವಿರ ಎಂಬುದು ಗಮನಾರ್ಹ. ಶಾಲೆ ಕಡಿಮೆ ಮಕ್ಕಳ ಹೆಚ್ಚು ಎಂದಾಗ ಸಹಜವಾಗಿಯೆ ಕಲ್ಯಾಣ ಕರ್ನಾಟಕ ವಿಭಾಗದ ಮಕ್ಕಳು ಆಂಗ್ಲ ಬೋಧನೆ ಕೊರತೆಯಿಂದ ಫಲಿತಾಂಶದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿಲ್ಲ. ಬೆಂಗಳೂರು, ಮೈಸೂರು ವಿಭಾಗವು ಅತಿ ಹೆಚ್ಚು ದ್ವಿಭಾಷಾ ಬೋಧನೆ ಶಾಲೆ ಹೊಂದಿರುವುದರಿಂದ ಅಲ್ಲಿ ಉತ್ತಮ ಫಲಿತಾಂಶ ಕಾಣಲಾಗುತ್ತಿದೆ. ಇದೀಗ ಕಲ್ಯಾಣ ಕರ್ನಾಟಕ ಭಾಗದಲ್ಲಿ ದ್ವಿಭಾಷಾ ಶಾಲೆ ಹೆಚ್ಚಾದಲ್ಲಿ ಮಕ್ಕಳಿಗೆ ಸಮಾನ ಅವಕಾಶ, ಕಲಿಕೆ ನೀಡಿದಂತಾಗುತ್ತದೆ. ಇದರಿಂದ ಈ ಭಾಗದ ಫಲಿತಾಂಶದಲ್ಲಿಯೂ ಸುಧಾರಣೆಯಾಗಲಿದೆ ಎಂದು ಡಾ.ಆಕಾಶ ಎಸ್. ಅವರು ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

**ಶಾಲೆಗಳ ಆಯ್ಕೆ**

| | |
|---|---|
| ಬೀದರ | –97 |
| ಬಳ್ಳಾರಿ | –119 |
| ಕಲಬುರಗಿ | –165 |
| ಕೊಪ್ಪಳ | –109 |
| ರಾಯಚೂರು | –176 |
| ವಿಜಯನಗರ | –134 |
| ಯಾದಗಿರಿ | –72 |

### ಅಕ್ಷರ ಆವಿಷ್ಕಾರ ಸಹಕಾರಿ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ.ಅಜಯ್ ಸಿಂಗ್ ಅವರ ಕನಸಿನ ಯೋಜನೆ "ಅಕ್ಷರ ಆವಿಷ್ಕಾರ" ಕಾರ್ಯಕ್ರಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ದ್ವಿಭಾಷಾ ಬೋಧನೆ ಪದ್ಧತಿಗೆ ನೀರೆರೆದು ಪೋಷಿಸಲಿದೆ. ಇದರಿಂದ ಶೈಕ್ಷಣಿಕವಾಗಿ ಹಿಂದುಳಿದ ಕಲಬುರಗಿ ಪ್ರದೇಶದ ಗ್ರಾಮೀಣ ಭಾಗದ ಬಡ ಮಕ್ಕಳು ಮಾತೃ ಭಾಷೆ ಕನ್ನಡದ ಜೊತೆ ಆಂಗ್ಲ ಕಲಿಕೆಯ ಸೌಲಭ್ಯ ಪಡೆಯಲಿದ್ದಾರೆ.

## ವಿಜ್ಞಾನ

### ನಕ್ಷತ್ರಗಳು ಏಕೆ ಮಿನುಗುತ್ತವೆ?

**ಆರ್.ಬಿ.ಗುರುಬಸವರಾಜ**

ಬೇಸಿಗೆಯ ರಾತ್ರಿ ವೇಳೆ ಶುಭ್ರ ಆಕಾಶದಲ್ಲಿದ್ದ ನಕ್ಷತ್ರಗಳನ್ನು ನೋಡುತ್ತ ಕುಳಿತಿದ್ದ ಪೆದ್ದುವಿಗೆ ತಟ್ಟನೆ ಒಂದು ಪ್ರಶ್ನೆ ಹೊಳೆಯಿತು. ತಕ್ಷಣ ಅಲ್ಲಿಯೇ ಇದ್ದ ಅಜ್ಜಿಗೆ "ಅಜ್ಜಿ ನಕ್ಷತ್ರಗಳೇಕೆ ಮಿನುಗುತ್ತವೆ?" ಎಂದು ಕೇಳಿದ. ಅವನ ಪ್ರಶ್ನೆಗೆ ಅಜ್ಜಿ ಸಮಾದಾನದಿಂದ ಉತ್ತರಿಸತೊಡಗಿದಳು. ರಾತ್ರಿಯ ಶುಭ್ರ ಆಗಸದಲ್ಲಿ ಲಕ್ಷಾಂತರ ನಕ್ಷತ್ರಗಳು ಕಾಣುತ್ತವೆ. ಬಹುತೇಕ ನಕ್ಷತ್ರಗಳು ಬರಿಗಣ್ಣಿಗೆ ಕಾಣುತ್ತವೆ. ನಕ್ಷತ್ರಗಳು ಮಿನುಗುವಂತೆ ಕಾಣುತ್ತವೆ. ವಾಸ್ತವದಲ್ಲಿ ನಕ್ಷತ್ರಗಳು ಮಿನುಗುವುದಿಲ್ಲ. ಆದರೆ ಭೂಮಿಯಿಂದ ನಾವು ಅವುಗಳನ್ನು ನೋಡಿದಾಗ ಮಿನುಗುವಂತೆ ಕಾಣುತ್ತವೆ. ವಾಯುಮಂಡಲದ ವಕ್ರೀಭವನ ಎಂಬ ವಿದ್ಯಮಾನದಿಂದಾಗಿ ರಾತ್ರಿಯ ಆಕಾಶದಲ್ಲಿ ನಕ್ಷತ್ರಗಳು ಮಿನುಗುವಂತೆ ಕಾಣುತ್ತವೆ. ನಕ್ಷತ್ರಗಳ ಬೆಳಕು ಭೂಮಿಯ ವಾತಾವರಣದ ಮೂಲಕ ಹಾದುಬರುತ್ತದೆ. ನಕ್ಷತ್ರದಿಂದ ಬಂದ ಬೆಳಕು ಭೂಮಿಯ ವಾತಾವರಣವನ್ನು ಪ್ರವೇಶಿಸಿದಾಗ, ಅದು ವಿಭಿನ್ನ ತಾಪಮಾನ ಮತ್ತು ಸಾಂದ್ರತೆಯೊಂದಿಗೆ ಗಾಳಿಯ ವಿವಿಧ ಪದರಗಳನ್ನು ಎದುರಿಸುತ್ತದೆ. ಈ ಪದರಗಳು ಮಸೂರಗಳಂತೆ ಕಾರ್ಯ ನಿರ್ವಹಿಸುತ್ತವೆ. ತಾಪಮಾನ ಮತ್ತು ಗಾಳಿಯ ಸಾಂದ್ರತೆಯಲ್ಲಿನ ಬದಲಾವಣೆಗಳಿಂದಾಗಿ ವಿವಿಧ ಕೋನಗಳಲ್ಲಿ ನಕ್ಷತ್ರಗಳ ಬೆಳಕು ವಕ್ರೀಭವನಗೊಳ್ಳುತ್ತದೆ ಅಥವಾ ಬಾಗುತ್ತದೆ.



ಬೆಳಕಿನ ಈ ಬಾಗುವಿಕೆಯು ನಕ್ಷತ್ರದ ಚಿತ್ರವು ವಿಭಿನ್ನ ದಿಕ್ಕುಗಳಲ್ಲಿ ಸ್ವಲ್ಪಮಟ್ಟಿಗೆ ಪಲ್ಲಟಗೊಳ್ಳುವಂತೆ ಕಾಣಿಸಬಹುದು ಮತ್ತು ಪಲ್ಲಟವು ಮಿನುಗುವ ನೋಟವನ್ನು ರಚಿಸಬಹುದು. ಇದರ ಜೊತೆಗೆ ವಾತಾವರಣದಲ್ಲಿನ ಗಾಳಿಯ ಚಲನೆಯು ಬೆಳಕನ್ನು ವಿವಿಧ ದಿಕ್ಕುಗಳಲ್ಲಿ ಹರಡಲು ಕಾರಣವಾಗುತ್ತದೆ. ಇದು ನಕ್ಷತ್ರಗಳು ಮಿನುಗುವಂತೆ ಕಾಣಲು ಕಾರಣವಾಗುತ್ತದೆ.

ನಕ್ಷತ್ರಗಳ ಮಿನುಗುವಿಕೆಯ ಪ್ರಮಾಣವು ವಾತಾವರಣದ ಪರಿಸ್ಥಿತಿಗಳನ್ನು ಅವಲಂಬಿಸಿ ಬದಲಾಗಬಹುದು. ವಾತಾವರಣವು ಪ್ರಕ್ಷುಬ್ಧವಾಗಿರುವಾಗ, ಉದಾಹರಣೆಗೆ ಗಾಳಿಯ ರಾತ್ರಿಯಲ್ಲಿ ಅಥವಾ ಗಾಳಿಯ ಉಷ್ಣತೆಯು ಬಹಳ ವ್ಯತ್ಯಾಸಗೊಂಡಾಗ, ಗಾಳಿಯು ನಿಶ್ಚಲವಾಗಿರುವಾಗ ಮತ್ತು ತಾಪಮಾನವು ಸ್ಥಿರವಾಗಿರುವಾಗ ನಕ್ಷತ್ರಗಳು ಹೆಚ್ಚು ಮಿನುಗುವಂತೆ ಕಾಣಿಸುತ್ತವೆ. ಕ್ಷಿತಿಜಕ್ಕೆ ಹತ್ತಿರವಿರುವ ನಕ್ಷತ್ರಗಳು ಹೆಚ್ಚು ಮಿನುಗುವಂತೆ ತೋರುತ್ತವೆ. ಏಕೆಂದರೆ ಅವುಗಳ ಬೆಳಕು ಭೂಮಿಯ ವಾತಾವರಣದ ದಪ್ಪವಾದ ಪದರದ ಮೂಲಕ ಹಾದುಬರುತ್ತದೆ.

## ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮ: ಕಲಾ ಪ್ರೇಕ್ಷಕರಿಗೆ ಭರಪೂರ ಮನರಂಜನೆ



**ಹಂಪಿ ಟೈಮ್ಸ್ ಬಳ್ಳಾರಿ**

ಸ್ಥಳೀಯ ಮಟ್ಟದ ಕಲಾ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜಿಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಾಂಸ್ಕೃತಿಕ ಸಮುಚ್ಚಯ ನಿರ್ವಹಣಾ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಪ್ರತಿ ತಿಂಗಳ ಮೂರನೇಯ ಶನಿವಾರದಂದು ನಗರದ ಡಾ.ರಾಜಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣದ ನಾಡೋಜ ಸುಭದ್ರಮ್ಮ ಮನ್ಸೂರು ಬಯಲು ರಂಗಮಂದಿರದಲ್ಲಿ 'ತಿಂಗಳ ಸೊಬಗು' ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಿದೆ.

ಈ ತಿಂಗಳ ಶನಿವಾರ ಏರ್ಪಡಿಸಿದ್ದ 'ತಿಂಗಳ ಸೊಬಗು' ಸಾಂಸ್ಕೃತಿಕ ಕಾರ್ಯಕ್ರಮಗಳು ಮನಸಿಗೆ ತುಸು ನೆಮ್ಮದಿ ದೊರೆಯುವ ತವಕದಿಂದ ಆಗಮಿಸಿದ್ದ ಕಲಾ ಪ್ರೇಕ್ಷಕರಿಗೆ, ಸಾರ್ವಜನಿಕರಿಗೆ ಭರಪೂರ ಮನರಂಜನೆ ನೀಡಿತು.

ಮುಸ್ಸಂಜೆ ಮೋಡ ಕವಿದು ಕತ್ತಲು ಆಗಮನ ಸಮಯದಲ್ಲಿ ಬಳ್ಳಾರಿ ಮೂಲದ ಜೀ ಕನ್ನಡ ವಾಹಿನಿಯ ಸರಿಗಮಪ –19 ರ ಸ್ಪರ್ಧಾಳು ಸೃಷ್ಟಿ ಸುರೇಶ್ ಅವರ ಸುಗಮ ಸಂಗೀತವು ಕೇಳುಗರು ಕಿವಿ ತಂಪಾಗಿಸಿತು. ಸಂಗೀತಕ್ಕೆ ಮನಸೋತು ಕಲಾ ಪ್ರೇಕ್ಷಕರು ಚಪ್ಪಾಳೆಗಳ ಸುರಿಮಳೆಗೈದರು. ಸಿರುಗುಪ್ಪದ ಕೆ.ನರಸಿಂಹ ಮೂರ್ತಿ ಅವರ ಹಾಸ್ಯ ಚಟಾಕಿಗೆ ನೆರೆದಿದ್ದವರು ನಗೆಗಡಲಲ್ಲಿ ತೇಲಾಡಿದರು. ಬಳ್ಳಾರಿಯ ಸುಜಾತ ಕಲಾ ಟ್ರಸ್ಟ್ ಅವರ ಸಮೂಹ ನೃತ್ಯವು ನೋಡುಗರ ಕಣ್ಮನ ಸೆಳೆಯಿತು. ಈ ಸಂಧರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಕಲಾವಿದರು, ಸಾರ್ವಜನಿಕರು ಉಪಸ್ಥಿತರಿದ್ದರು.



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA